

# ಅನಂತಪಥ



‘ಪ್ರಧಾನಿಯಾಗುವ ಅರ್ಹತೆಯಿದ್ದ ಧುರೀಣ’

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-3

ಡಾ. ಬಾಬು ಕೃಷ್ಣಮೂರ್ತಿ

ಸಂಪುಟ - 2 ಡಿಸೆಂಬರ್ - 2021 ಸಂಚಿಕೆ - 6

# ಪರಿಸರಸ್ನೇಹಿ ಪ್ಲೇಟ್ ಬ್ಯಾಂಕ್ ಯೋಜನೆ



ಪರಿಸರ ಮಾಲಿನ್ಯಕ್ಕೆ ನಮ್ಮ ಸಭೆ ಸಮಾರಂಭಗಳ ಕೊಡುಗೆ ಕಡಿಮೆಯೇನಲ್ಲ. ಕಾಫಿ, ಚಹಾ, ಪಾನೀಯಗಳನ್ನು ಅತಿಥಿಗಳಿಗೆ ವಿತರಿಸಲು ಪ್ಲಾಸ್ಟಿಕ್,ಪೇಪರ್ ಲೋಟಗಳನ್ನು ವ್ಯಾಪಕವಾಗಿ ಬಳಸುವುದನ್ನು ನಾವು ನೋಡಿದ್ದೇವೆ. ಪ್ಲಾಸ್ಟಿಕ್ ಲೋಟ, ತಟ್ಟೆಗಳಲ್ಲಿ ಬಿಸಿ ಪದಾರ್ಥಗಳನ್ನು ಸೇವಿಸುವುದರಿಂದ ಕ್ಯಾನ್ಸರ್ ಉಂಟಾಗುತ್ತದೆಂದು ತಜ್ಞರು ಹೇಳುತ್ತಾರೆ. ದ್ರವವನ್ನು ಹೀರಿಕೊಳ್ಳದಂತೆ ಪೇಪರ್ ಲೋಟಗಳ ಒಳಗೆ ಲೇಪಿಸುವ ಅಂಟು ಕೂಡ ಆರೋಗ್ಯಕ್ಕೆ ಹಾನಿಕರ.

ಐಐಟಿ ಖರಗ್ ಪುರದಲ್ಲಿ ಡಾ. ಸುಧಾ ಗೋಯೆಲ್ ನೇತೃತ್ವದಲ್ಲಿ ನಡೆದ ಒಂದು ಅಧ್ಯಯನದ ಅಂಗವಾಗಿ ಪೇಪರ್ ಮತ್ತು ಪ್ಲಾಸ್ಟಿಕ್ ಲೋಟಗಳಲ್ಲಿ 100 ಮಿಲೀ. ಬಿಸಿನೀರನ್ನು ತುಂಬಿ ಹದಿನೈದು ನಿಮಿಷಗಳ ನಂತರ ಪರೀಕ್ಷಿಸಿದಾಗ ಪ್ರತಿಯೊಂದು ಲೋಟ ನೀರಿನಲ್ಲಿಯೂ ಸುಮಾರು 25000 ಪ್ಲಾಸ್ಟಿಕ್ ಕಣಗಳು ಬೆರೆತಿರುವುದು ಪತ್ತೆಯಾಯಿತು. ಹೀಗಾಗಿ ದಿನವೊಂದಕ್ಕೆ ಸರಾಸರಿ ಮೂರು ಬಾರಿ ಕಾಫಿ, ಚಹಾ ಸೇವಿಸುವ ವ್ಯಕ್ತಿಯ ದೇಹದಲ್ಲಿ ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾದ ಸುಮಾರು 75000 ಪ್ಲಾಸ್ಟಿಕ್ ಕಣಗಳು ಸೇರಿಕೊಳ್ಳುತ್ತವೆ. ಈ ಮೈಕ್ರೋ ಪ್ಲಾಸ್ಟಿಕ್ ಕಣಗಳು ದೇಹಕ್ಕೆ ಹಾನಿಕರವಾದ ಅಯಾನುಗಳು ಪಲೇಡಿಯಂ, ಕ್ಯಾಡ್ಮಿಯಂ ಮತ್ತು ಕ್ರೋಮಿಯಂ ನಂತಹ ಭಾರಲೋಹಗಳನ್ನೂ ದೇಹಕ್ಕೆ ಸೇರಿಸುತ್ತವೆ. ಇನ್ನು ಅಡುಗೆ ಮನೆಗಳಲ್ಲಿ ಪ್ಲಾಸ್ಟಿಕ್ ಬಳಕೆಯ ಕಡೆಗೆ ಪರಿಸರವಾದಿಗಳ, ಕಾನೂನು ಪಾಲಕರ ಗಮನ ಇನ್ನೂ ಹರಿದಿಲ್ಲ. ಮದುವೆ ಮನೆಗಳಲ್ಲಿ ಮತ್ತು ಅನೇಕ ಹೋಟೆಲುಗಳಲ್ಲಿ ಇಡ್ಲಿ ತಯಾರಿಸಲು ಪ್ಲಾಸ್ಟಿಕ್ ಹಾಳೆಗಳನ್ನು ಮತ್ತು ಲೋಟಗಳನ್ನು ಬಳಸುತ್ತಾರೆ. ಹೋಳಿಗೆ, ಚಪಾತಿ, ರೊಟ್ಟಿಗಳನ್ನು ತಯಾರಿಸಲು ಕೂಡ ಪ್ಲಾಸ್ಟಿಕ್ ಹಾಳೆಗಳನ್ನು ಬಳಸುತ್ತಾರೆ. ಈ ರೀತಿಯ ಪ್ಲಾಸ್ಟಿಕ್ ಬಳಕೆಯಿಂದ ಗ್ರಾಹಕರ, ಅತಿಥಿಗಳ ಆರೋಗ್ಯ ಹದಗೆಡುವುದರಲ್ಲಿ ಅನುಮಾನವೇ ಇಲ್ಲ.

ಸಮಾರಂಭಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲೂ ಬಳಸಿ ಎಸೆಯುವ ಪ್ಲಾಸ್ಟಿಕ್ ಬಾಟಲುಗಳನ್ನು ಉಪಯೋಗಿಸುತ್ತಾರೆ. ಇವು ಮಾನವನ ಆರೋಗ್ಯದ ಮೇಲೆ ನೇರವಾಗಿ ಹಾನಿಯನ್ನುಂಟು ಮಾಡುವುದರ ಜೊತೆಗೆ ಪರಿಸರದಲ್ಲಿ ತ್ಯಾಜ್ಯವಾಗಿ ಉಳಿದು ದೀರ್ಘ ಕಾಲದ ವರೆಗೆ ಪರೋಕ್ಷವಾದ ಹಾನಿಯನ್ನೂ ಉಂಟು ಮಾಡುತ್ತವೆ.

ಸಭೆ ಸಮಾರಂಭಗಳಲ್ಲಿ ಉಂಟಾಗುವ ಈ ಪ್ಲಾಸ್ಟಿಕ್ ಅವಾಂತರಗಳನ್ನು ಸೂಕ್ಷ್ಮವಾಗಿ ಗಮನಿಸಿದ ಅನಂತಕುಮಾರ್ ದಂಪತಿಗಳು 2016 ರಲ್ಲಿ ನಡೆದ ತಮ್ಮ ಮಗಳು ಐಶ್ವರ್ಯಾ ಮದುವೆಯ ಸಂದರ್ಭದಲ್ಲಿ ಹತ್ತುಸಾವಿರ ಸೆಟ್ ಸ್ಟೀಲ್ ಪ್ಲೇಟ್, ಲೋಟ ಮತ್ತು ಚಮಚಗಳನ್ನು ಖರೀದಿಸಿ ಬಳಸಿದರು. ನಂತರ ಅವೆಲ್ಲವನ್ನೂ ಇತರರು ನಡೆಸುವ ಸಮಾರಂಭಗಳಲ್ಲಿ ಬಳಸಲು ಉಚಿತವಾಗಿ ನೀಡತೊಡಗಿದರು. ಹೀಗೆ 'ಬಳಸಿ ಹಿಂತಿರುಗಿಸಿ' ಎಂಬ ಆಲೋಚನೆಗೆ ಅನುಗುಣವಾಗಿ ಉದಯವಾಯಿತು, “ಪ್ಲೇಟ್ ಬ್ಯಾಂಕ್” ಎಂಬ ವಿನೂತನ ಯೋಜನೆ!

ಇದೊಂದು ಧರ್ಮಾರ್ಥ ಸೇವೆಯಾಗಿರುವುದರಿಂದ ಪ್ಲೇಟ್ ಲೋಟ ಮತ್ತು ಚಮಚಗಳ ಬಳಕೆಗೆ ಯಾವುದೇ ಶುಲ್ಕ ವಿಧಿಸುವುದಿಲ್ಲ. ಆದರೆ ಈ ಸೇವೆಯನ್ನು ಪಡೆಯುವ ಮೊದಲು ತಾವು ಪಡೆಯುವ ಪ್ಲೇಟ್, ಲೋಟ ಮತ್ತು ಚಮಚಗಳ ಬೆಲೆಗೆ ಸಮನಾದ ಚೆಕ್ ಒಂದನ್ನು ನೀಡಬೇಕಾಗುತ್ತದೆ. ವಸ್ತುಗಳನ್ನು ವಾಪಸ್ ಕೊಡುವಾಗ ಚೆಕ್ಕನ್ನು ಹಿಂದಿರುಗಿಸಲಾಗುತ್ತದೆ. ಪ್ಲಾಸ್ಟಿಕ್ ಬಳಕೆಯನ್ನು ತಪ್ಪಿಸಲು ಅದಮ್ಯ ಚೇತನ ಸಂಸ್ಥೆಯು ಹತ್ತಿಯ ಕೈಬಟ್ಟೆ (ನ್ಯಾಪ್ಕಿನ್) ಮತ್ತು ಟೇಬಲ್ ಕ್ಲಾತ್ ಗಳನ್ನೂ ಉಚಿತವಾಗಿ ಒದಗಿಸುತ್ತದೆ. ಲೋಟ ತಟ್ಟೆಗಳನ್ನು ಸ್ವಚ್ಛ ಮಾಡಿ ಹಿಂದಿರುಗಿಸಬೇಕು. ಆದರೂ ಅವುಗಳ ಸ್ವಚ್ಛತೆಯನ್ನು ಕಾಪಾಡಲು ಸಂಸ್ಥೆಯು ಆಧುನಿಕ ಡಿಶ್ ವಾಷರ್ ಒಂದನ್ನೂ ಅಳವಡಿಸಿಕೊಂಡಿದೆ.

ಪರಿಸರ ಪ್ರಿಯರ ಪ್ರಶಂಸೆಯನ್ನು ಪಡೆದಿರುವ ಈ ಯೋಜನೆಯು ಈಗಾಗಲೇ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿದೆ. ಪ್ರತಿ ದಿನ ಸುಮಾರು 2000 ಕ್ಕೂ ಹೆಚ್ಚು ಪ್ಲಾಸ್ಟಿಕ್ ಲೋಟ ತಟ್ಟೆಗಳ ಬಳಕೆಯನ್ನು ತಪ್ಪಿಸಿ ಅಷ್ಟರ ಮಟ್ಟಿಗೆ ಪರಿಸರಮಾಲಿನ್ಯವನ್ನು ಕಡಿಮೆ ಮಾಡಿದ ತೃಪ್ತಿ ಅದಮ್ಯ ಚೇತನ ಸಂಸ್ಥೆಗಿದೆ.

ಇಂದು ಬೆಂಗಳೂರು, ಕಲಬುರಗಿ, ಹುಬ್ಬಳ್ಳಿ ಮತ್ತು ಗದಗ ನಗರಗಳಲ್ಲಿ ಪ್ಲೇಟ್ ಬ್ಯಾಂಕ್ ಕಾರ್ಯ ನಿರ್ವಹಿಸುತ್ತಿದೆ. ಸ್ವಯಂಸೇವಕರ ನೆರವಿನಿಂದ ಪ್ರತಿಯೊಂದು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿಯೂ ಈ ಯೋಜನೆಯನ್ನು ಪ್ರಾರಂಭಿಸುವ ಮಹತ್ವಾಕಾಂಕ್ಷೆಯನ್ನು ಅದಮ್ಯಚೇತನ ಸಂಸ್ಥೆ ಹೊಂದಿದೆ.



**ಪ್ಲೇಟ್ ಬ್ಯಾಂಕ್ ಯೋಜನೆಯ ನೆರವು ಪಡೆಯಲು ಸಂಪರ್ಕಿಸಿ:**

**ಬೆಂಗಳೂರು:** ಅನ್ನಪೂರ್ಣ, ಬಿಬಿಎಂಪಿ ಸಮುದಾಯ ಭವನ, ಕೆಂಪೇಗೌಡ ನಗರ, ಬೆಂಗಳೂರು 560019 ದೂರವಾಣಿ: 080-26620404

**ಹುಬ್ಬಳ್ಳಿ:** 'ಗುರುಪ್ರಭ ' ಕೆಂಪಣ್ಣನವರ ಕಲ್ಯಾಣ ಮಂಟಪದ ಸಮೀಪ, ವಿಜಯ ನಗರ, ಹುಬ್ಬಳ್ಳಿ-580032 ದೂರವಾಣಿ: 9845658879

**ಕಲಬುರ್ಗಿ:** ಅನ್ನಪೂರ್ಣ, ಮಹಾನಗರ ಪಾಲಿಕೆ ಕಟ್ಟಡ, ಸಂತೋಷ ಕಾಲನಿ, ಉದನೂರು ರಸ್ತೆ, ಕಲಬುರ್ಗಿ.
ದೂರವಾಣಿ: 9448359355/7353638000

**ಗದಗ:** ಸನ್ ರೈಸ್ ಪ್ರೀ ಸ್ಕೂಲ್, ರೈಲ್ವೆ ಪೋಲೀಸ್ ಕ್ವಾರ್ಟರ್ಸ್ ಸಮೀಪ, ಮಾಸರಿ, ಗದಗ-582101 ದೂರವಾಣಿ: 8050692131



**ಕಾಡು ನೋಡುವ ರೀತಿ ಬದಲಾಗಲಿ**

ಕೆ. ಎಂ. ಚಿಣ್ಣಪ್ಪ

ಪುಟ - 4

**‘ಅಂತರ್ಜಲದ ಪುನಶ್ಚೇತನವಾಗಬೇಕು’**

ಶ್ರೀ ಹೆಚ್. ಎನ್. ಎ. ಪ್ರಸಾದ್

ಪುಟ - 5



**ಜನನಾಯಕನ ಲಕ್ಷಣಗಳು**

ಡಾ. ದೊಡ್ಡರಂಗೇ ಗೌಡ

ಪುಟ - 7





ಪುಟ - 9

**ಕರ್ನಾಟಕದಲ್ಲಿ ಸಂಘದ ಪ್ರವರ್ತಕ**

ವ್ಯಕ್ತಿ ವಿಶೇಷ ಮಾಲಿಕೆ

# ಪಾಲಿಯೆಸ್ಟರ್ ಬಟ್ಟೆಯ ರೂಪಾಂತರಣ ಮತ್ತು ಮರುಬಳಕೆ (Reduce & Reuse)



ಮಾನವನು ಕಳೆದೊಂದು ಶತಮಾನದಿಂದ ತನ್ನ ವಿನಾಶಕ್ಕೆ ಕಾರಣವಾಗಬಹುದಾದ ಅನೇಕ ಆವಿಷ್ಕಾರಗಳನ್ನು ಮಾಡಿದ್ದಾನೆ. ಅವುಗಳಲ್ಲಿ ಪ್ಲಾಸ್ಟಿಕ್ ಅತ್ಯಂತ ವಿನಾಶಕಾರಿಯಾಗಿದ್ದರೆ ಪಾಲಿಯೆಸ್ಟರ್ ದಾರದ ಆವಿಷ್ಕಾರವೂ ಅಷ್ಟೇ ವಿನಾಶಕಾರಿಯಾಗಿದೆ. ಈ ಎರಡೂ ಆವಿಷ್ಕಾರಗಳು ಬಡತನದ ಆಸರೆಯನ್ನು ಪಡೆದು ವಿಜೃಂಭಿಸುತ್ತಿವೆ.

ಪ್ಲಾಸ್ಟಿಕ್ಕಿನಂತೆಯೇ ಪಾಲಿಯೆಸ್ಟರ್ ಕೂಡ ಹಲವಾರು ಅವತಾರಗಳನ್ನು ಎತ್ತಿದೆ. ಇಂದು ಹತ್ತಿ, ರೇಶ್ಮೆ, ಮುಂತಾದ ಎಲ್ಲ ಪ್ರಕೃತಿಸಹಜ ಬಟ್ಟೆಗಳನ್ನು ಅನುಕರಿಸಿ ಪಾಲಿಯೆಸ್ಟರ್ ಕೃತಕ ರೂಪದಲ್ಲಿ ಮಾರುಕಟ್ಟೆಗೆ ದಾಳಿಯಿಟ್ಟಿದೆ. ಕೆಲವು ಗುಣಮಟ್ಟದ ಪ್ಲಾಸ್ಟಿಕ್ಕನ್ನು ಮರುಬಳಕೆ ಮಾಡಬಹುದು, ಆದರೆ ಪಾಲಿಯೆಸ್ಟರ್ ಬಟ್ಟೆಯನ್ನು ಮರುಬಳಕೆ ಮಾಡುವುದು ಸಾಧ್ಯವಿಲ್ಲ. ಶುದ್ಧ ಹತ್ತಿಯ ಬಟ್ಟೆಯನ್ನು ಮರುಬಳಕೆ ಮಾಡುವುದು ಸಾಧ್ಯ, ಆದರೆ ಅದಕ್ಕೆ ಶೇ 5 ರಷ್ಟು ಪಾಲಿಯೆಸ್ಟರ್ ಬೆರೆಸಿದರೂ ಸಾಕು, ಹತ್ತಿಯು ತನ್ನ ಮೂಲ ಗುಣವನ್ನು ಕಳೆದುಕೊಳ್ಳುತ್ತದೆ. ಹೀಗಾಗಿ ಅದರ ಮರುಬಳಕೆ ಅಸಾಧ್ಯವಾಗುತ್ತದೆ.

2018ರಲ್ಲಿ 5.5 ಕೋಟಿ ಮೆಟ್ರಿಕ್ ಟನ್ ಪಾಲಿಯೆಸ್ಟರ್ ಜಗತ್ತಿನಲ್ಲಿ ಉತ್ಪಾದನೆಯಾಗಿದ್ದು ಅದು ಒಟ್ಟು ಬಟ್ಟೆ ಉತ್ಪಾದನೆಯ ಶೇ. 52 ರಷ್ಟಿತ್ತು. ಇದರ ಉತ್ಪಾದನೆಯಲ್ಲಿ ಪಳೆಯುಳಿಕೆ ಇಂಧನಗಳನ್ನು ಬಳಸಲಾಗುತ್ತದೆ ಎಂಬುದೊಂದೇ ಸಾಕು, ಇದು ಪರಿಸರಕ್ಕೆ ಎಷ್ಟು ಹಾನಿಕರವೆಂದು ವಿವರಿಸಲು. ಇಥಲೀನ್, ಗ್ಲೈಕೋಲ್ ಮತ್ತು ಟೆರೆಥಾಲಿಕ್ ಆಮ್ಲಗಳ ಸಂಯುಕ್ತವಾದ PET ಪ್ಲಾಸ್ಟಿಕ್ ತಂತುಗಳನ್ನು ಪಾಲಿಯೆಸ್ಟರ್ ಎನ್ನುತ್ತಾರೆ. ಅಂದರೆ, ಇದೂ ಒಂದು ರೀತಿಯ ಪ್ಲಾಸ್ಟಿಕ್ ಎಂದಂತಾಯಿತು!

ಪಾಲಿಯೆಸ್ಟರ್ ಜೈವಿಕ ವಿಘಟನೆಗೊಳಗಾಗುವ ವಸ್ತುವಲ್ಲ. ಹೀಗಾಗಿ ಅದು ನೂರಾರು ವರ್ಷಗಳ ವರೆಗೆ ಮಣ್ಣಿನಲ್ಲಿ ಉಳಿದುಕೊಳ್ಳುತ್ತದೆ. ಪಾಲಿಯೆಸ್ಟರ್ ಮತ್ತು ನೈಲಾನ್ ಬಟ್ಟೆಗಳನ್ನು ಧರಿಸುವಾಗ ಅದರ ಕೆಲವು ಪ್ಲಾಸ್ಟಿಕ್ ಕಣಗಳು ಗಾಳಿಯಲ್ಲಿ ಸೇರಿಕೊಳ್ಳುತ್ತವೆ; ಅವುಗಳನ್ನು ಒಗೆಯುವಾಗಲೂ ಹೆಚ್ಚಿನ ಮಟ್ಟದ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ನೀರಿನ ಜೊತೆ ಬೆರೆತು ಅಂತಿಮವಾಗಿ ಸಮುದ್ರವನ್ನು ಸೇರುತ್ತವೆ. ಇತ್ತೀಚಿನ ಅಧ್ಯಯನದ ಪ್ರಕಾರ ನಾವು ವಾರ್ಷಿಕವಾಗಿ 176500 ಮೆಟ್ರಿಕ್ ಟನ್ನುಗಳಷ್ಟು ಕೃತಕ ಸೂಕ್ಷ್ಮ ತಂತುಗಳನ್ನು (Micro Fibres) ಪರಿಸರಕ್ಕೆ ಸೇರಿಸುತ್ತಿದ್ದೇವೆ. ಇವು ಆಹಾರದ ಮೂಲಕ, ಗಾಳಿಯ ಮೂಲಕ, ನೀರಿನ ಮೂಲಕ ನಮ್ಮ ದೇಹವನ್ನು ಸೇರುತ್ತಿವೆ. ಪಾಲಿಯೆಸ್ಟರ್ ಮತ್ತು ನೈಲಾನ್ ಸೂಕ್ಷ್ಮ ಕಣಗಳು ಕ್ಯಾನ್ಸರ್ ಕಾರಕಗಳಾಗಿದ್ದು ಇವುಗಳನ್ನು ಸೇವಿಸುವ ಜಲಚರಗಳನ್ನು ಆಹಾರದಲ್ಲಿ ಬಳಸುವಾಗ ಅವು ಮಾನವನ ದೇಹವನ್ನು ಸೇರಿಕೊಳ್ಳುತ್ತವೆ. ಪಾಲಿಯೆಸ್ಟರ್ ತಯಾರಿಸುವ ಕಾರ್ಖಾನೆಗಳು ಕೋಬಾಲ್ಟ್ ಮ್ಯಾಂಗನೀಸ್ ಲವಣಗಳು, ಸೋಡಿಯಂ ಬ್ರೋಮೈಡ್, ಮತ್ತು ಟೈಟಾನಿಯಂ ಡಯಾಕ್ಸೈಡ್ ಮುಂತಾದ ವಿಷಕಾರಕಗಳನ್ನು ಅಗಾಧಪ್ರಮಾಣದಲ್ಲಿ ಹೊರಹಾಕುತ್ತಿವೆ.



ಪಾಲಿಯೆಸ್ಟರ್ ಫ್ಯಾಷನ್ ಜಗತ್ತಿಗೆ ಅತ್ಯಂತ ಪ್ರಿಯವಾದ ಬಟ್ಟೆಯಾಗಿರುವುದರಿಂದ ಪರಿಸರವಾದಿಗಳ ಎಚ್ಚರಿಕೆಯ ಮಾತುಗಳನ್ನು ಅಲಕ್ಷಿಸಲಾಗುತ್ತಿದೆ. ಇದೇ ಕಾರಣದಿಂದ ಅಗತ್ಯಕ್ಕಿಂತ ಹೆಚ್ಚಿನ ಮಟ್ಟದ ಪಾಲಿಯೆಸ್ಟರ್ ಉತ್ಪಾದನೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಒಮ್ಮೆ ಬಳಸಿದ ಪಾಲಿಯೆಸ್ಟರ್ ಬಟ್ಟೆಗಳನ್ನು ರೂಪಾಂತರಗೊಳಿಸಿ ಮರುಬಳಕೆಗೆ ಒಗ್ಗಿಸಿ ಅದರ ಬಾಳಿಕೆಯನ್ನು ಹೆಚ್ಚಿಸುವುದು ನಾವು ಮಾಡಬಹುದಾದ ಸಣ್ಣ ಕೆಲಸ. ಈ ದಿಸೆಯಲ್ಲಿ ಅದಮ್ಯ ಚೇತನ ಸಂಸ್ಥೆಯು Reduce and Reuse (ರೂಪಾಂತರ ಮತ್ತು ಮರುಬಳಕೆ) ಎಂಬ ಯೋಜನೆಯನ್ನು ಪ್ರಾರಂಭಿಸಿದೆ.

"ಅದಮ್ಯ ಚೇತನದಲ್ಲಿ ಚೀಲಗಳನ್ನು ಹೊಲಿಯುವ ಕಾರ್ಯಕ್ರಮವನ್ನು ನಾವು 2006-2007 ರಲ್ಲಿಯೇ ಪ್ರಾರಂಭಿಸಿದೆವು. ಒಮ್ಮೆ ಗಣೇಶ ಚತುರ್ಥಿಯ ಸಂದರ್ಭದಲ್ಲಿ ಮನೆಗೆ ಬಂದವರಿಗೆ ಏನಾದರೂ ಕೊಡುವಾಗ ಅದನ್ನು ಹಾಕಿಕೊಡಲು ಹೆಗಲಿಗೂ ಹಾಕಿಕೊಳ್ಳಬಲ್ಲ ಕೈಯಲ್ಲಿ ಹಿಡಿಯುವ ಅನುಕೂಲತೆಯೂ ಉಳ್ಳ ಚೀಲಗಳನ್ನು ನಮ್ಮ ತಾಯಿಯ ಸಹಾಯ ಪಡೆದುಕೊಂಡು ನಾನು ವಿನ್ಯಾಸ ಮಾಡಿದ್ದೆ. ಆಗ ನಾವು ಹೊಸ ಬಟ್ಟೆಯನ್ನು ಬಳಸಿದ್ದೆವು. ಅದನ್ನು ನೋಡಿದ ನಮ್ಮ ಎಚ್ ಎನ್ ಎ ಪ್ರಸಾದ್ ಅವರು ಇದೇ ರೀತಿಯ ಚೀಲಗಳನ್ನು ಅದಮ್ಯ ಚೇತನ ಸಂಸ್ಥೆಯ ವತಿಯಿಂದ ತಯಾರಿಸಿ ವಿತರಿಸಬಹುದೆಂದು ಸಲಹೆ ನೀಡಿದರು. ಈ ಸಲುವಾಗಿ ಕೂಡಲೇ ಒಂದು ಲಕ್ಷ ರೂಪಾಯಿಗಳ ದೇಣಿಗೆಯನ್ನೂ ನೀಡಿದರು. ನಾವು ಚೀಲಗಳನ್ನು ತಯಾರಿಸಿ ಅದರ ಎರಡೂ ಕಡೆಗಳಲ್ಲಿ ಅದಮ್ಯಚೇತನದ ಹೆಸರನ್ನು ಮುದ್ರಿಸಿ ಎಲ್ಲರಿಗೂ ಹಂಚಿದೆವು. ಆಗ ಹತ್ತಿಯ ಕೈಚೀಲಗಳನ್ನು ತಯಾರಿಸುವುದು ನಮ್ಮ ಉದ್ದೇಶವಾಗಿತ್ತು" ಎಂದು R R ಯೋಜನೆಯು ಪ್ರಾರಂಭವಾದ ಸಂದರ್ಭವನ್ನು ಡಾ. ತೇಜಸ್ವಿನಿ ಅನಂತಕುಮಾರರು ನೆನಪಿಸಿಕೊಳ್ಳುತ್ತಾರೆ.



2016 ರಲ್ಲಿ ಅನಂತಕುಮಾರ್ ದಂಪತಿಗಳ ಮಗಳ ವಿವಾಹದ ಸಂದರ್ಭ. ಮದುವೆಗೆ ಬಂದ ಅತಿಥಿಗಳಿಗೆ ತಾಂಬೂಲವನ್ನು ಹಾಕಿಕೊಡಲು ಚೀಲಗಳು ಬೇಕಾಗಿದ್ದವು. ತಾಂಬೂಲ ಹಿಡಿಸುವಷ್ಟೇ ದೊಡ್ಡ ಚೀಲ ಕೊಟ್ಟರೆ ಅದು ಮತ್ತೊಬ್ಬರಿಗೆ ತಾಂಬೂಲ ಹಾಕಿಕೊಡುವುದಕ್ಕೆ ಬಳಕೆಯಾಗಬಹುದೇ ಹೊರತು ಇನ್ನು ಯಾವ ಉಪಯೋಗಕ್ಕೂ ಬರುವುದಿಲ್ಲ. " ಆದುದರಿಂದ ಸಾಕಷ್ಟು ದೊಡ್ಡ ಗಾತ್ರದ ಚೀಲಗಳನ್ನೇ ತಯಾರಿಸಿ ಅದರ ಮೇಲೆ ವಧೂವರರ ಹೆಸರನ್ನೂ ಅತ್ಯಂತ ಚಿಕ್ಕ ಅಕ್ಷರಗಳಲ್ಲಿ ಮುದ್ರಿಸಿದೆವು. ವಧೂವರರ ಹೆಸರನ್ನು ದೊಡ್ಡದಾಗಿ ಬರೆಯಿಸಿದರೆ ಅನೇಕರು ಅದನ್ನು ಮರುಬಳಸಲು ಹಿಂಜರಿಯಬಹುದು ಎಂಬುದು ನಮ್ಮ ಎಣಿಕೆ. ಇಂದಿಗೂ ಆ ಚೀಲಗಳನ್ನು ಅನೇಕರು ಬಳಸುತ್ತಿರುವುದನ್ನು ಗಮನಿಸಿದಾಗ ಸಂತಸವಾಗುತ್ತದೆ" ಎಂದು ಡಾ. ತೇಜಸ್ವಿನಿಯವರು ಹೇಳುತ್ತಾರೆ.

ಆಗ ಸುಮಾರು ಹತ್ತು ಸಾವಿರ ಚೀಲಗಳನ್ನು ಹಂಚಲಾಗಿತ್ತು. ಪರಿಸರ ಸ್ನೇಹಿ ಜೀವನಕ್ರಮವು ಅದಮ್ಯಚೇತನ ಸಂಸ್ಥೆಯ ಒಂದು ಉದ್ದೇಶವಾದರೆ " ಶೂನ್ಯ ತ್ಯಾಜ್ಯ" ಇನ್ನೊಂದು ಉದ್ದೇಶ. ಮನೆಮನೆಗಳಲ್ಲಿರುವ ಹಳೆಯ ಪಾಲಿಯೆಸ್ಟರ್ ಸೀರೆಗಳ ವಿಲೇವಾರಿ ಒಂದು ದೊಡ್ಡ ಸಮಸ್ಯೆ. ಅದನ್ನು ಯಾರಿಗಾದರೂ ಕೊಡೋಣವೆಂದರೆ ಎಂತಹ ಬಡವರ ಮನೆಯಲ್ಲಿಯೂ ಪಾಲಿಯೆಸ್ಟರ್ ಸೀರೆಗಳು ಸಾಕಷ್ಟು ಇರುತ್ತವೆ. ಒಂದು ಕಡೆ ಪಾಲಿಯೆಸ್ಟರ್ ಸಮಸ್ಯೆಗೆ ಪರಿಹಾರ ಕಾಣಬೇಕು, ಇನ್ನೊಂದು ಕಡೆ ಹತ್ತಿಯ ಚೀಲಗಳ ಬೆಲೆ ವಿಪರೀತ ಜಾಸ್ತಿಯಿರುವುದರಿಂದ ಜನಸಾಮಾನ್ಯರು ಅವುಗಳನ್ನು ಕೊಂಡುಕೊಳ್ಳಲು ಹಿಂಜರಿಯುತ್ತಾರೆ; ಈ ಎರಡು ವಿಚಾರಗಳ ನಡುವಣ ದಾರಿಯನ್ನು ಹಲವು ಸ್ನೇಹಿತರು ಕಲೆತು ವಿಚಾರ ಮಾಡುವಾಗ RR Bags (Reduce & Reuse bags) ಕಲ್ಪನೆ ಹುಟ್ಟಿಕೊಂಡಿತು.

ಫೇಸ್ ಬುಕ್ ಮುಂತಾದ ಸಾಮಾಜಿಕ ಮಾಧ್ಯಮಗಳ ಮೂಲಕ ಹಳೆಯ ಸೀರೆಗಳನ್ನು ಸಂಸ್ಥೆಗೆ ಕೊಡುವಂತೆ ಮನವಿ

ಪುಟ 7 ರಲ್ಲಿ ಮುಂದುವರೆದಿದೆ

# 'ಪ್ರಧಾನಿಯಾಗುವ ಅರ್ಹತೆಯಿದ್ದ ಧುರೀಣ'

ಡಾ. ಬಾಬು ಕೃಷ್ಣಮೂರ್ತಿ

ನಾನು ಕಂಡಂತೆ



ಅನಂತಕುಮಾರ್

ಅನಂತಕುಮಾರ್ ಅವರು ಮೊದಲ ಬಾರಿಗೆ ನನ್ನ ಗಮನಕ್ಕೆ ಬಂದಿದ್ದು ಅವರು 14-15 ವರ್ಷದ ಕಿಶೋರನಾಗಿದ್ದಾಗ. ಎಮರ್ಜೆನ್ಸಿಯ ದಿನಗಳಲ್ಲಿ ದೇಶದಲ್ಲಿ ಅಲ್ಲೋಲ ಕಲ್ಲೋಲ ಪರಿಸ್ಥಿತಿ ಉಂಟಾಗಿತ್ತು. ನಾವು ಬಹಳಷ್ಟು ಜನ ಎಮರ್ಜೆನ್ಸಿಯ ವಿರುದ್ಧ ಹೋರಾಟ ಮಾಡುತ್ತಿದ್ದೆವು. ವಿದ್ಯಾರ್ಥಿಗಳ ದೊಡ್ಡ ಸಮೂಹವೇ ಇದರಲ್ಲಿ ಉತ್ಸಾಹದಿಂದ ಭಾಗವಹಿಸಿ ಮುಖ್ಯ ಪಾತ್ರವನ್ನು ವಹಿಸಿತ್ತು. ಹಾಗೆ ನೋಡಿದರೆ ವಿದ್ಯಾರ್ಥಿಗಳಿಂದಲೇ ಎಮರ್ಜೆನ್ಸಿ ವಿರುದ್ಧದ ಈ ಚಳುವಳಿಗೆ ಬಲವಾದ ಶಕ್ತಿ ಬಂದಿತ್ತು. ಆದುದರಿಂದ ವಿದ್ಯಾರ್ಥಿಗಳ ಸತ್ಯಾಗ್ರಹದ ಸಿದ್ಧತೆಗಾಗಿ ವಿದ್ಯಾರ್ಥಿಗಳ ಸಭೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೋರಾಟದ ಮುಂಚೂಣಿ ನಾಯಕರು ನನಗೆ ವಹಿಸಿದ್ದರು.

ಈ ಸಲುವಾಗಿ ನಾನು ಕರ್ನಾಟಕ ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದ್ದೆ, ಹಾಗೆಯೇ ಹುಬ್ಬಳ್ಳಿಗೂ ಹೋಗಿದ್ದೆ. ಈ ಎಲ್ಲ ಸಭೆಗಳೂ ರಹಸ್ಯವಾಗಿ ನಡೆಯುತ್ತಿದ್ದವು. ಹುಬ್ಬಳ್ಳಿಯ ಸಭೆಯನ್ನು ರಾತ್ರಿಯಲ್ಲಿ ಏರ್ಪಡಿಸಲಾಗಿತ್ತು. ಸುಮಾರು ಹತ್ತು ಹನ್ನೊಂದು ಕಾಲೇಜುಗಳ ವಿದ್ಯಾರ್ಥಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಅವರ ನಡುವೆ ಇದ್ದ ಒಬ್ಬ ತೇಜಸ್ವಿ ಯುವಕ ನನ್ನ ಗಮನ ಸೆಳೆದಿದ್ದ. ಅವರೇ ಅನಂತಕುಮಾರ್ ಎಂದು ನನಗೆ ಪರಿಚಯವಾದದ್ದು ಅನೇಕ ವರ್ಷಗಳ ನಂತರ. ಅದೂ ಒಂದು ವಿಶೇಷವಾದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ. ಆ ಸಮಾರಂಭಕ್ಕೆ ನನ್ನನ್ನು ಸಾಹಿತಿಯೆಂದು ಗುರುತಿಸಿ ಆಹ್ವಾನಿಸಿದ್ದರು. ಅದೇ ಸಭೆಯಲ್ಲಿ ಕೇಂದ್ರದಲ್ಲಿ ಸಚಿವರಾಗಿದ್ದ ಅನಂತಕುಮಾರರೂ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದರು. ಆಗ ನಾನು ಈ ಹಿಂದೆ ಹುಬ್ಬಳ್ಳಿಯಲ್ಲಿ ಕಂಡ ತೇಜಸ್ವಿ ಬಾಲಕ ಇವರೇ ಇರಬಹುದೇ ಎಂದು ಅನುಮಾನಿಸಿ ದೃಢಪಡಿಸಿಕೊಂಡೆ. ಹುಬ್ಬಳ್ಳಿಯ ಸಭೆ ನಡೆದ ಮರುದಿನ ನಾವೆಲ್ಲ ಚಳುವಳಿಯಲ್ಲಿ ಭಾಗವಹಿಸಿದ್ದನ್ನು ಇಬ್ಬರೂ ನೆನಪಿಸಿಕೊಂಡೆವು. ನಮ್ಮ ದೇಶ ಕಂಡ ಅದ್ಭುತ ಸಾಮರ್ಥ್ಯದ ನಾಯಕನೊಬ್ಬನನ್ನು ಅವರ ಎಳವೆಯಲ್ಲಿಯೇ ಗುರುತಿಸಿದ್ದೆ ಎಂಬುದು ನನಗೆ ಸಂತಸದ ವಿಷಯ.

### ಪ್ರಧಾನಿಯಾಗಬಲ್ಲ ಸಮರ್ಥ

ನಮ್ಮ ಕರ್ನಾಟಕ, ನಮ್ಮ ದೇಶ ಕಂಡ ಅತ್ಯಂತ ವಿಶಿಷ್ಟ ವ್ಯಕ್ತಿ, ಅನಂತಕುಮಾರ್. ಅವರ ಜೀವನವೇ ಒಂದು ಅದ್ಭುತ. ಹೋರಾಟದ ಕೆಚ್ಚು ಅವರಿಗೆ ಜನ್ಮಜಾತವಾಗಿ ಬಂದಿತ್ತು. ಅವರು ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದರು. ಅವರ ತಾಯಿಯವರೂ ರಾಜಕೀಯದಲ್ಲಿ, ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ತಂದೆ ಒಳ್ಳೆಯ ಕುಸ್ತಿ ಪಟು ಮತ್ತು ಯೋಗ ಪಟು ಆಗಿದ್ದು ರೈಲ್ವೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಇಂತಹ ಕುಟುಂಬದಲ್ಲಿ ಜನಿಸಿದ ಅನಂತಕುಮಾರ್ ಅತ್ಯಂತ ಎತ್ತರಕ್ಕೆ ಏರಿದರು. ಇನ್ನೂ ಎತ್ತರಕ್ಕೆ ಏರುವ ಅವಕಾಶಗಳು ಅವರಿಗಿದ್ದವು, ಅವರಲ್ಲಿ ಸಾಮರ್ಥ್ಯವೂ ಇತ್ತು. ನನ್ನ ಪಕ್ಕದಲ್ಲಿ ಕುಳಿತಿರುವ ಈ ಕ್ಯಾಬಿನೆಟ್ ಸಚಿವರಲ್ಲಿ ದೇಶದ ಪ್ರಧಾನ ಮಂತ್ರಿಯಾಗಲು ಬೇಕಾದ ಸಾಮರ್ಥ್ಯ, ಪ್ರತಿಭೆ, ಚಾಣಾಕ್ಷತೆ, ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ ಎಲ್ಲವೂ ಇದೆ ಎಂದು ನನ್ನ ಅಭಿಪ್ರಾಯಗಳನ್ನು ಅಂದಿನ ಸಭೆಯಲ್ಲಿ ಮುಕ್ತವಾಗಿ ಹೇಳಿದ್ದೆ. ಅಂದು ನನ್ನ ಮಾತುಗಳಿಗೆ ಅನಂತಕುಮಾರರು ಸಂಕೋಚ ವ್ಯಕ್ತ ಪಡಿಸಿದ್ದರು. ಅವರ ಮುಖಸ್ತುತಿ ಮಾಡುವುದು ನನ್ನ ಉದ್ದೇಶವಾಗಿರಲಿಲ್ಲ, ಅವರ ಬಗ್ಗೆ ಅದು ನನ್ನ ಪ್ರಾಮಾಣಿಕ ಅಭಿಪ್ರಾಯವಾಗಿತ್ತು.

### ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿ

ಅನಂತಕುಮಾರರಲ್ಲಿ ಅಗಾಧವಾದ ಸಾಮರ್ಥ್ಯವಿತ್ತು. ಯಾವ ಕೆಲಸವನ್ನಾದರೂ ಹಠದಿಂದ ಸಾಧಿಸಿ ತೋರಿಸುವ ಅಂತಃಶಕ್ತಿ ಅವರಲ್ಲಿತ್ತು. ಅವರು ಮುಂದೆ ಇಟ್ಟ ಹೆಜ್ಜೆಯನ್ನು ಎಂದಿಗೂ ಹಿಂದೆ ತೆಗೆದವರಲ್ಲ. ವಿದ್ಯಾರ್ಥಿ ಪರಿಷತ್ತನ್ನು ಕಟ್ಟಿ ಬೆಳೆಸಿದವರ ಸಾಲಿನಲ್ಲಿ ಅನಂತಕುಮಾರರು ಪ್ರಮುಖರು. ನಾನೂ ಕೂಡ 1962-63 ರಲ್ಲಿ ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿಯಾಗಿದ್ದೆ. ಆದರೆ ಅಂದಿನ ವಿದ್ಯಾರ್ಥಿ ಪರಿಷತ್ತಿಗೂ ಅನಂತಕುಮಾರರ ಕಾಲದ ವಿದ್ಯಾರ್ಥಿ ಪರಿಷತ್ತಿಗೂ ಅಜಗಜಾಂತರ ವ್ಯತ್ಯಾಸವಿತ್ತು. ನಮ್ಮ ಕಾಲದಲ್ಲಿ ಅಲ್ಲೊಂದು ಇಲ್ಲೊಂದು ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ನಡೆಸಿ ನಾವು ಸುಮ್ಮನಾಗುತ್ತಿದ್ದೆವು. ಆದರೆ ಅನಂತಕುಮಾರ್, ಅರುಣ್ ಜೈಟ್ಲಿ ಮುಂತಾದವರು ಅದನ್ನು ಒಂದು ಬಲಿಷ್ಠ ಸಂಘಟನೆಯನ್ನಾಗಿ ರೂಪಿಸಿದರು. ಅನಂತಕುಮಾರರಂತೂ ಕರ್ನಾಟಕದಲ್ಲಿ ಬಿರುಗಾಳಿಯಂತೆ ಪ್ರವಾಸ ಮಾಡುತ್ತಿದ್ದರು. ನಿಂತ ಕಡೆ ನಿಲ್ಲದೆ ಊರಿಂದೂರಿಗೆ ಹೋಗಿ ಅಲ್ಲಿನ ಶಾಲಾಕಾಲೇಜುಗಳ ವಿದ್ಯಾರ್ಥಿಗಳನ್ನು ಭೇಟಿಮಾಡಿ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿದರು. ವಿದ್ಯಾರ್ಥಿಗಳ ಒಂದು ಸಂಸ್ಥೆಯನ್ನು ಯಾವ ರೀತಿಯಲ್ಲಿ ಕಟ್ಟಬೇಕೆಂಬುದಕ್ಕೆ ಮಾದರಿಯಾಗಿ ಅನಂತಕುಮಾರರ ಕೆಲಸಗಳನ್ನು ತೋರಿಸಬಹುದು. ಅಂದಿನ ದಿನಗಳಲ್ಲಿ ಅವರು ಪರಿಷತ್ತಿಗಾಗಿ ಅಹರ್ನಿಶಿ ದುಡಿಯುತ್ತಿದ್ದರು.

### ರಾಜಕೀಯ ಪ್ರವೇಶ

ವಿದ್ಯಾರ್ಥಿ ಪರಿಷತ್ತಿನಲ್ಲಿ ಅವರ ಕೆಲಸಗಳನ್ನು ಗಮನಿಸಿದ ಹಿರಿಯ ನಾಯಕರು ಇವರು ರಾಜಕೀಯವನ್ನು ಪ್ರವೇಶಿಸಿದರೆ ಅದರಿಂದ ಸಮಾಜಕ್ಕೆ, ದೇಶಕ್ಕೆ ಹೆಚ್ಚಿನ ಲಾಭವಾಗುತ್ತದೆ ಎಂದು ಭಾವಿಸಿ ಮೊದಲಿಗೆ ಭಾರತೀಯ ಯುವ ಮೋರ್ಚಾ ಸಂಘಟನೆಯ ಕಾರ್ಯದರ್ಶಿ, ನಂತರ ಭಾರತೀಯ ಜನತಾ ಪಕ್ಷದ ಕಾರ್ಯದರ್ಶಿಯ ಸ್ಥಾನಗಳಿಗೆ ನಿಯೋಜಿಸಿದರು. ನಂತರದ ದಿನಗಳಲ್ಲಿ ಅವರು ಪಕ್ಷದ ಪ್ರಮುಖ ರಾಷ್ಟ್ರೀಯ ನಾಯಕರಾಗಿ ಗುರುತಿಸಿಕೊಂಡರು. ಹೀಗೆ ಸಾರ್ವಜನಿಕ ರಂಗಕ್ಕೆ ಕಾಲಿರಿಸಿದ ಮೇಲಂತೂ ಮನೆ, ಮಠ, ತಾಯಿ, ತಂದೆ, ಬಂಧು, ಬಳಗ ಮುಂತಾದ ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಧ್ಯೇಯ ಸಾಧನೆಗಾಗಿ ಕೈಗೊಂಡ ಕರ್ತವ್ಯಗಳನ್ನು ಮುಖ್ಯವೆಂದು ಭಾವಿಸಿದರು. ಅನಂತಕುಮಾರರ ಕರ್ತವ್ಯ ನಿಷ್ಠೆ ಮತ್ತು ಅವರ ಪ್ರತಿಭೆಗಳು ವಾಜಪೇಯಿ, ಅದ್ವಾನಿಯವರಂತಹ ಹಿರಿಯ ನಾಯಕರನ್ನೂ ಆಕರ್ಷಿಸಿದವು. ಹೀಗಾಗಿ ಅತಿ ಕಿರಿಯ ವಯಸ್ಸಿನಲ್ಲಿಯೇ ಕೇಂದ್ರ ಸರಕಾರದಲ್ಲಿ ಮಂತ್ರಿಯಾಗುವ ಅವಕಾಶವೂ ಅವರಿಗೆ ದೊರೆಯಿತು.

ಅವರು ತಮಗೆ ಯಾವುದೇ ಖಾತೆಯ ಜವಾಬ್ದಾರಿಯನ್ನು ವಹಿಸಿದರೂ ಅದನ್ನು ಯಶಸ್ವಿಯಾಗಿ ನಿರ್ವಹಿಸಿದರು. ಪ್ರತಿಯೊಂದು ಖಾತೆಯಲ್ಲಿಯೂ ಹೊಸ ಹೊಸ ಯೋಜನೆಗಳನ್ನು ಪ್ರಾರಂಭಿಸಿ ಜಾರಿಗೆ ತಂದರು. ತಮ್ಮ ಅಧಿಕಾರವನ್ನು ದೇಶದ ಪ್ರಗತಿಗಾಗಿ, ಸಮಾಜದ ಒಳಿತಿಗಾಗಿ ಬಳಸಿಕೊಳ್ಳಬೇಕೆಂಬ ದೃಷ್ಟಿಯಿಂದ ಬೇವು ಲೇಪಿತ ಯೂರಿಯಾ ಮುಂತಾದ ನವೀನ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದರು.

ಅನಂತಕುಮಾರರು ಮಾಡಿದ ಅನೇಕ ಕೆಲಸಗಳು ದಾಖಲೆಯಾಗುವುದೇ ಇಲ್ಲ. ಏಕೆಂದರೆ ಅವೆಲ್ಲ ಮಂತ್ರಿಯಾಗಿ ತಮ್ಮ ಕರ್ತವ್ಯದ ಭಾಗ ಎಂದೇ ಅವರು ಭಾವಿಸುತ್ತಿದ್ದರು. ಆದುದರಿಂದ ಆಸಕ್ತಿಯಿರುವ ಜನರು ಅವರು ಯಾವ ಯಾವ ಖಾತೆಗಳಲ್ಲಿ ಕೆಲಸ ಮಾಡಿದರೋ ಆ ಖಾತೆಗಳಲ್ಲಿ ಮಾಡಿದ ಸಾಧನೆಗಳನ್ನು ದಾಖಲಿಸುವ ಕೆಲಸ ಮಾಡಬೇಕು.

ಪುಟ 8 ರಲ್ಲಿ ಮುಂದುವರೆದಿದೆ

## ಅನಂತಪಥ ಮಾಸಪತ್ರಿಕೆಯ ಬಿಡುಗಡೆ



ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ ಆಜಾದರ ಜೀವನವನ್ನು ಚಿತ್ರಿಸಿರುವ ಡಾ. ಬಾಬು ಕೃಷ್ಣಮೂರ್ತಿಯವರ 'ಅಜೇಯ' ಕೃತಿ ಯುವಜನತೆಯ ಮನಸ್ಸುಗಳಲ್ಲಿ ದೇಶಪ್ರೇಮವನ್ನು ತುಂಬಿದ ಪರಿ ಅತಿಶಯವಾದುದು. ಅಂತಹ ಯುವಜನರಲ್ಲಿ ಅನಂತಕುಮಾರರೂ ಒಬ್ಬರಾಗಿದ್ದರು. ಅನಂತಕುಮಾರ್ ಒಂದು ಸಂದರ್ಭದಲ್ಲಿ ಶ್ರೀ ಬಾಬು ಕೃಷ್ಣಮೂರ್ತಿಯವರನ್ನು ಪರಿಚಯಿಸುತ್ತ, "ಇವರು ಬರೆದ ಅಜೇಯ ಓದಿದೆ. ಜೈಲಿಗೆ ಹೋದೆ. ಆಮೇಲೆ ಮಂತ್ರಿಯೂ ಆದೆ" ಎಂದಿದ್ದರು.

ಅನಂತಪಥ ಮಾಸಪತ್ರಿಕೆಯ ನವೆಂಬರ್ 2021 ಸಂಚಿಕೆಯನ್ನು ಖ್ಯಾತ ಲೇಖಕ ಡಾ. ಬಾಬು ಕೃಷ್ಣಮೂರ್ತಿಯವರು ಬಿಡುಗಡೆಮಾಡಿದರೆಂದು ತಿಳಿಸಲು ಸಂತೋಷವೆನಿಸುತ್ತದೆ. ಈ ಕಾರ್ಯಕ್ರಮದಲ್ಲಿ ಡಾ. ತೇಜಸ್ವಿನಿ ಅನಂತಕುಮಾರ್, ಅನಂತಪಥ ಪತ್ರಿಕೆಯ ಸಂಪಾದಕ ಶ್ರೀ ಟಿ.ಎಸ್. ಗೋಪಾಲ್, ಅದಮ್ಯ ಚೇತನದ ಕಾರ್ಯಕರ್ತರಾದ ಶ್ರೀ ನಾಗೇಂದ್ರ , ಶ್ರೀ ಪೂರ್ಣಪ್ರಜ್ಞ ಮೊದಲಾದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಅನಂತಕುಮಾರ್ ಅವರ ವ್ಯಕ್ತಿತ್ವ ಸಾಧನೆಗಳನ್ನು ಕುರಿತು ತಮ್ಮ ವಿಚಾರಗಳನ್ನು ಶ್ರೀ ಬಾಬು ಕೃಷ್ಣಮೂರ್ತಿ ಹಂಚಿಕೊಂಡರು. ಅವರ ಭಾಷಣದ ಸಂಗ್ರಹರೂಪವನ್ನು ಈ ಸಂಚಿಕೆಯಲ್ಲಿ ಕೊಡಲಾಗಿದೆ.

# ಕಾಡು ನೋಡುವ ರೀತಿ ಬದಲಾಗಲಿ



**ಕೆ. ಎಂ. ಚಿಣ್ಣಪ್ಪ**, ನಿವೃತ್ತ ಅರಣ್ಯಾಧಿಕಾರಿ ಮತ್ತು ಸಂರಕ್ಷಣಾವಾದಿ

ಮನುಷ್ಯನ ಬದುಕು ಪ್ರಾಣವಾಯುವನ್ನು ಅವಲಂಬಿಸಿರುವಂಥದು. ಪ್ರತಿಕ್ಷಣದ ಉಸಿರಾಟವೇ ನಮ್ಮನ್ನು ಬದುಕಿಸಿದೆ. ಈ ಉಸಿರು ಹಸಿರಿನೊಂದಿಗೆ ಬೆರೆತುಕೊಂಡಿದೆ. ಹಾಗಾಗಿ ಹಸಿರನ್ನು ಉಳಿಸಿದರೆ, ಗಿಡ ಮರಗಳನ್ನು ಪೋಷಿಸಿದರೆ ಮನುಕುಲದ ಉಸಿರನ್ನು ಸಂರಕ್ಷಿಸಿದಂತಾಗುತ್ತದೆ. ಪರಿಸರ ನಾಶವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಹಸಿರು ಸಮರ್ಥನೆಯೇ ಹಿರಿದಾದ ಸಮಾಜ ಸೇವೆಯಾಗಿದೆ.

ಶಾಲಾ ಮಕ್ಕಳಿಗೆ ಕಾಡುಗಳನ್ನು ಪರಿಚಯ ಮಾಡಿಸುವ ಸಲುವಾಗಿ ಪ್ರವಾಸ ಕಾರ್ಯಕ್ರಮಗಳನ್ನು ಏರ್ಪಡಿಸುವಾಗ "ಕಾಡು ಯಾಕೆ ಬೇಕು?" ಎಂದು ಮಕ್ಕಳಲ್ಲಿ ನಾನು ಪ್ರಶ್ನೆ ಮಾಡುತ್ತಿದ್ದೆ. ಎಲ್ಲ ಮಕ್ಕಳೂ ಮರಗಿಡಗಳ ಬಗ್ಗೆ ಮಾತನ್ನಾಡುತ್ತಾರೆಯೇ ಹೊರತು ನಮ್ಮ ಬದುಕಿಗೆ ಅಗತ್ಯವಾದ ಗಾಳಿಯೂ ನೀರೂ ಅನಂತವಾಗಿ ಸಿಗಬೇಕಾದರೆ ಕಾಡು ಬೇಕು ಅನ್ನುವ ಅರಿವೇ ಆ ಮಕ್ಕಳಲ್ಲಿ ಇರಲಿಲ್ಲ. ನಮ್ಮ ಸಾಮಾನ್ಯ ಜನರಲ್ಲಿಯೂ, "ನಾವು ಕಾಡಿನಲ್ಲಿಯೇ ಹುಟ್ಟಿ ಬೆಳೆದವರು, ಕಾಡಿನ ಬಗ್ಗೆ ಇವರೇನೂ ನಮಗೆ ಹೇಳಿಕೊಡಬೇಕಾಗಿಲ್ಲ, ಕಾಡಿನ ಬಗ್ಗೆ ನಮಗೆ ಎಲ್ಲ ಗೊತ್ತುಂಟು" ಎಂಬ ಧೋರಣೆಯಿದೆ.

ಆದರೆ ಜೆಸಿಬಿಯಂತಹ ಬೃಹತ್ ಯಂತ್ರಗಳು ಬಂದ ಮೇಲೆ ಕಾಡುಗಳು ಹೇಗೆ ಹಾಳಾಗುತ್ತಿವೆ ಎಂಬುದನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆಗಳನ್ನು ನಿರೂಪಿಸಿದರೆ ಮಾತ್ರ ಆ ಕಾಡು ಉಳಿಯುತ್ತದೆ; ಜನರಿಗೂ ಉಪಯೋಗವಾಗುತ್ತದೆ. ಆದರೆ ಇಂದು ನಡೆಯುತ್ತಿರುವುದೇ ಬೇರೆ. ಪಶ್ಚಿಮಘಟ್ಟಗಳು ವಿಶ್ವಪಾರಂಪರಿಕ ತಾಣವಾಗಬೇಕು ಎಂದು ಯುನೆಸ್ಕೋದವರು ಹೇಳಿದರು, ಜನರು ಅದರಿಂದ ತಮಗೆ ತೊಂದರೆಯಾಗುತ್ತದೆ ಎಂದು ಭಾವಿಸಿಕೊಂಡು ತುಂಬಾ ವಿರೋಧ ವ್ಯಕ್ತಪಡಿಸಿದರು. ಆದರೆ ದೂರದೃಷ್ಟಿಯ ನಿಸ್ವಾರ್ಥ ರಾಜಕಾರಣಿ ಶ್ರೀ ಅನಂತಕುಮಾರರು ಮಾತ್ರ "ವಿಶ್ವಪಾರಂಪರಿಕ ತಾಣ" ಎಂಬ ಘೋಷಣೆಯನ್ನು ವಿರೋಧಿಸುವುದು ನೋಬೆಲ್ ಪಾರಿತೋಷಕ ಬಂದಾಗ ಅದನ್ನು ಬೇಡ ಎಂದು ನಿರಾಕರಿಸುವುದಕ್ಕೆ ಸಮ ಎಂದು ಹೇಳಿದರು.

ಅದೇ ರೀತಿ, ಗೋಪಾಲಸ್ವಾಮಿ ಬೆಟ್ಟ. ಇದರ ಬಗ್ಗೆ ನಾವು ಹೆಚ್ಚು ಕಾಳಜಿ ವಹಿಸುತ್ತಿಲ್ಲ. ಅಲ್ಲಿ ಏನೂ ಬೆಳೆಯುವುದಿಲ್ಲ, ಹುಲ್ಲು ಬಿಟ್ಟರೆ ಮತ್ತೇನೂ ಬೆಳೆಯದ ಶುಷ್ಕ ಪ್ರದೇಶ ಎಂದು ನಿರ್ಧರಿಸಿ ಕೆಲವು ಇಲಾಖೆಯವರು ಸೇರಿಕೊಂಡು ಅಲ್ಲಿ ಹುಲ್ಲು ಬೆಳೆಯುವ ಯೋಜನೆಯನ್ನು ಹಾಕಿಕೊಂಡರು. ವಾರ್ಷಿಕ 200 ಇಂಚು ಮಳೆ ಬೀಳುವ ಪ್ರದೇಶದಲ್ಲಿ ಬೆಳೆಯುವಂತಹ ಹುಲ್ಲನ್ನು ಅಲ್ಲಿ ಬೆಳೆಸಬೇಕು ಎಂದು ನಿರ್ಧರಿಸಿ ಬಹಳ ದುಡ್ಡು ಖರ್ಚು ಮಾಡಿದರು. ಹಾಗೆ ಬೆಳೆಸಿದ ಹುಲ್ಲು ಕಳೆದ ವರ್ಷ ಬೆಂಕಿ ತಗುಲಿ ಭಸ್ಮವಾಯಿತು. ಅವೈಜ್ಞಾನಿಕವಾಗಿ ವ್ಯಯ ಮಾಡಿದ ಕೋಟಿ ಕೋಟಿ ರೂಪಾಯಿ ವ್ಯರ್ಥವಾಯಿತು. ಯಾವುದೂ ಉಳಿಯಲಿಲ್ಲ. ಹೀಗೆಯೇ, ಅವೈಜ್ಞಾನಿಕವಾದ ಯೋಜನೆಗಳಿಂದ ಕಾಡುಗಳನ್ನು ನಾಶ ಮಾಡುತ್ತಿದ್ದೇವೆ.

ನಾನು ಕೊಡಗಿನಲ್ಲಿ ಹುಟ್ಟಿ ಬೆಳೆದವನು. ಒಂದು ಕಾಲದಲ್ಲಿ ಕೊಡಗಿನ ಶೇ ೮೬ ರಷ್ಟು ಕಾಡುಪ್ರದೇಶವಾಗಿತ್ತು. ಜನರು ಕೇವಲ ಕೃಷಿ ಅಂದರೆ ಗದ್ದೆ ಬೇಸಾಯ ಮಾಡುತ್ತಿದ್ದರು. ಆಗ ಕಾಫಿ ಬೆಳೆಯುತ್ತಿರಲಿಲ್ಲ. ಯಾವಾಗ ಕಾಫಿಗೆ ಬೆಲೆ ಬಂದಿತೋ ಆಗ ಕಾಡು ನಿಧಾನವಾಗಿ ಮರೆಯಾಗುತ್ತ ಬಂದಿತು. ಕೊಡಗಿನಲ್ಲಿಯೇ ನೀರಿಗೆ ತತ್ವಾರ ಬರಲು ಶುರುವಾಯಿತು. ನಮ್ಮ ಕಣ್ಣೆದುರೇ ಈ ರೀತಿ ನಡೆಯಿತು. ಈ ಪರಿಸ್ಥಿತಿ ಏಕೆ ಬಂದಿತು ಎಂದು ನೀವು ಯೋಚನೆ ಮಾಡಿ.



ನಾವು ಕಾಡನ್ನು ನೋಡುವ ರೀತಿ ಬದಲಾಗಬೇಕು. ನೀರಿನ ಮೂಲಗಳನ್ನು ಕಳೆದುಕೊಂಡರೆ ನಾವು ಬದುಕಲು ಸಾಧ್ಯವೆ? ಎಂದು ಯೋಚನೆ ಮಾಡಬೇಕು. ಕಾಡಿಗೆ ನೀರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯಿದೆ. ಇದಕ್ಕೊಂದು ಸಣ್ಣ ಉದಾಹರಣೆ ನೀಡುತ್ತೇನೆ: ನಾನು 1969 ರಲ್ಲಿ ಬಳ್ಳಾರಿಗೆ ಹೋಗಿದ್ದೆ. ಆಗ ಅಲ್ಲಿ ಒಂದೂ ಬೋರ್‌ವೆಲ್ ಇರಲಿಲ್ಲ: ಅಲ್ಲಿ ಎಲ್ಲ ತೆರೆದ ಬಾವಿಗಳು ಇದ್ದವು. ಈಗಲೂ ನೀವು ಹೋಗಿ ನೋಡಿದರೆ ಅಲ್ಲಿ ಹಳೇ ಬಾವಿಗಳನ್ನು ಕಾಣಬಹುದು. ಅಂದು ಇಪ್ಪತ್ತೈದು, ಮೂವತ್ತು ಅಡಿಗಳ ಆಳದಲ್ಲಿ ಒಳ್ಳೆಯ ನೀರು ಸಿಗುತ್ತಿತ್ತು. ಈಗ ಅದೇ ಜಾಗದಲ್ಲಿ 3000ಅಡಿ ಆಳಕ್ಕೆ ಬೋರ್‌ವೆಲ್ ಕೊರೆದರೂ ನೀರು ಸಿಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದ್ದು ಹೇಗೆ? ಮೊದಲು ಅಲ್ಲಿ ತುಂಬಾ ಕುರುಚಲು ಕಾಡು ಇತ್ತು. ಗಣಿಗಾರಿಕೆ ಪ್ರಾರಂಭವಾದಾಗ ಅವೆಲ್ಲವನ್ನೂ ಸಂಹಾರ ಮಾಡಿದರು. ಕುರುಚಲು ಕಾಡು ಯಾವಾಗ ಮಾಯವಾಯಿತೋ ಆಗ ಜಲಮೂಲಗಳೆಲ್ಲ ಬತ್ತಿ ಹೋದವು.

ಕೋಲಾರದಲ್ಲಿಯೂ ಈ ಮೊದಲು ಮೂರು ನಾಲ್ಕು ವರ್ಷಕ್ಕೊಮ್ಮೆ ಮಳೆಯಾಗುತ್ತಿತ್ತು. ಅಲ್ಲಿ ಎಲ್ಲಾ ಕೆರೆಗಳು ತುಂಬಿಕೊಂಡು ಜಲಸಮೃದ್ಧಿಯಿತ್ತು. ಆದರೆ ಅಲ್ಲಿನ ಬೆಟ್ಟ ಗುಡ್ಡಗಳನ್ನೆಲ್ಲ ಕ್ರಮೇಣ ಹಾಳು ಮಾಡಿದರು. ಬರೀ ಕುರಿ ಮತ್ತಿತರ ಪಶು ಸಂಗೋಪನೆ ಹೆಚ್ಚಾಗಿ ಈಗ ಕೋಲಾರ ಏನಾಗಿದೆ ನೋಡಿ. ಗೌರಿಬಿದನೂರು ಪ್ರದೇಶ ನಿಧಾನವಾಗಿ ಮರುಭೂಮಿಯಾಗುತ್ತಿದೆ ಎಂದು ತಜ್ಞರು ಹೇಳುತ್ತಿದ್ದಾರೆ.

ಪರಿಸರದಲ್ಲಿ ಮಾನವನ ಹಸ್ತಕ್ಷೇಪ ಎಷ್ಟು ಕಡಿಮೆಯಾಗುತ್ತದೆಯೋ ಅಷ್ಟೇ ಕಾಡು ಉಳಿದುಕೊಳ್ಳುತ್ತದೆ. ಇಲ್ಲದಿದ್ದರೆ ಅದರ ಪರಿಣಾಮ ಎಷ್ಟು ಘೋರವಾಗಿರುತ್ತದೆ ಎಂಬುದನ್ನು ನಾವು ಈಗಾಗಲೇ ನೋಡುತ್ತಿದ್ದೇವೆ. ಹಿಂದೆ, ನಮ್ಮ ಹಿರಿಯರು ಪ್ರಕೃತಿಯನ್ನು ದೇವರು ಎಂದು ಪೂಜಿಸುತ್ತಿದ್ದರು ಈಗಲೂ ನಾವು ಅದೇ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗಬೇಕು. ಹಾಗೆ ಮಾಡದಿದ್ದರೆ ಮಾನವ ಜನಾಂಗಕ್ಕೆ ಉಳಿಗಾಲವಿಲ್ಲ.
(ಸೌಜನ್ಯ: ಆಕಾಶವಾಣಿ, ಮೈಸೂರು)

# 'ಅಂತರ್ಜಲದ ಪುನಶ್ಚೇತನವಾಗಬೇಕು'

ಶ್ರೀ ಹೆಚ್. ಎನ್. ಎ. ಪ್ರಸಾದ್
ನಿಸರ್ಗವಾದಿ ,ಸಾಮಾಜಿಕ ಕಾರ್ಯಕರ್ತರು



ನಗರ ಪ್ರದೇಶಗಳಲ್ಲಿ ವಾಹನ ಸಂಚಾರ ದಟ್ಟಣೆ ಮತ್ತು ಇಂಗಾಲದ ಆಮ್ಲದ ಹೊರಹೊಮ್ಮುವಿಕೆ ಬಹಳ ದೊಡ್ಡ ಸಮಸ್ಯೆಯಾಗಿದೆ. ಯಾರೂ ವಾಹನಗಳ ಬಳಕೆಯನ್ನು ಕಡಿಮೆ ಮಾಡೋಣ, ಹೆಚ್ಚುತ್ತಿರುವ ಇಂಗಾಲದ ಡೈಆಕ್ಸೈಡಿನ ಪ್ರಮಾಣವನ್ನು ಕಡಿಮೆ ಮಾಡೋಣ ಎಂದು ಮಾತಾಡುವುದಿಲ್ಲ.

ನಗರ ಪ್ರದೇಶದಲ್ಲಿ ಮತ್ತೊಂದು ದೊಡ್ಡ ಸಮಸ್ಯೆ, ನೀರು. ಉದಾಹರಣೆಗೆ, ಬೆಂಗಳೂರು ನಗರ ಪ್ರದೇಶದ ಶೇಕಡ 40 ಭಾಗಕ್ಕೆ ಮಾತ್ರ ಸರ್ಕಾರವು ಬೆಂಗಳೂರು ನೀರು ಸರಬರಾಜು ಮಂಡಳಿಯ ಮೂಲಕ ನೀರು ಸರಬರಾಜು ಮಾಡುತ್ತಿದೆ. ಮಿಕ್ಕ 60 ಭಾಗದ ಜನರು ಬೆಂಗಳೂರಿನ ಸುತ್ತಮುತ್ತ ಸುಮಾರು ೫೦ ಕಿಲೋಮೀಟರ್ ಫಾಸಲೆಯಲ್ಲಿರುವ ಅಂತರ್ಜಲ, ಭೂಜಲ ಎಲ್ಲವನ್ನೂ ಖಾಲಿ ಮಾಡಿದ್ದಾರೆ. ಇದರಿಂದ ಎಂತಹ ಪರಿಸ್ಥಿತಿ ಉಂಟಾಗಿದೆಯೆಂದರೆ ಇಂದು ದೂರದ ಮುಳಬಾಗಿಲಿನಿಂದ ನೀರು ತರಬೇಕಾಗಿದೆ.

ನೀರು ಪ್ರಕೃತಿಯಿಂದ ನಿರ್ಮಾಣವಾಗುವ ಒಂದು ಪದಾರ್ಥ, ಅದರ ವಿತರಣೆಯನ್ನೂ ಪ್ರಕೃತಿಯೇ ಮಾಡುತ್ತಿತ್ತು ಎಂಬುದು ಜನರಿಗೆ ಮರೆತುಹೋಗಿದೆ. ಪ್ರಕೃತಿಯ ಅಸಮತೋಲನದಿಂದ ನೀರು ವಿತರಣೆಯಾಗುವುದು ಬಹಳ ವ್ಯತ್ಯಯವಾಗಿದೆ. ಇದರ ಕುರಿತು ಚಿಂತಿಸುವ ಬದಲು ಜನರು ಎತ್ತಿನ ಹೊಳೆ ತಿರುವು, ನೇತ್ರಾವತಿ ತಿರುವು, ಕೆಂಬೆಟ್ಟದ ಜೋಡಣೆ ಮುಂತಾದ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾರೆ. ನದಿಗಳ ಸುಗಮ ಹರಿವು, ನದಿ ನೀರಿನ ನೈಸರ್ಗಿಕ ವಿತರಣೆ, ಪರಿಸರ, ಪರಿಸರ ಅಸಮತೋಲನದಿಂದ ಧಕ್ಕೆಯಾಗುವ ವಿಷಯಗಳ ಕುರಿತು ಯಾರೂ ಮಾತನಾಡುವುದಿಲ್ಲ.

ಪ್ರಪಂಚದಾದ್ಯಂತ, ಎಲ್ಲ ನಗರಗಳಲ್ಲಿ ಈಗಲೂ ಯಾರಿಗೂ ಸಸ್ಯರಾಶಿ, ವನ್ಯರಾಶಿ ಉಳಿಯುವಿಕೆಯ ಬಗ್ಗೆ ಚಿಂತೆಯಿಲ್ಲ. ಶ್ರೀ ಅನಂತಕುಮಾರರು ಪರಿಸರದ ಕಾಳಜಿ ಹೊಂದಿದ್ದ ವಿಶಿಷ್ಟ ರಾಜಕಾರಣಿಯಾಗಿದ್ದರು. ಕರ್ನಾಟಕ ರಾಜ್ಯದಲ್ಲಿ ಹಿಂದಿನ ಭಾಜಪ ಸರ್ಕಾರದ ಕಾಲದಲ್ಲಿ ವಿಧಾನಸಭೆಯಲ್ಲಿ ಎಲ್ಲಾ ಪಕ್ಷಗಳು ಸೇರಿ ಪಶ್ಚಿಮಘಟ್ಟಗಳನ್ನು ಪರಿಸರಸೂಕ್ಷ್ಮ ಜೀವರಾಶಿ ಹೊಂದಿದ ಪಾರಂಪರಿಕ ತಾಣ ಎಂಬ ಯುನೆಸ್ಕೋ ಸಂಸ್ಥೆಯ ಘೋಷಣೆಯನ್ನು ವಿರೋಧಿಸಿದ್ದರು. ಶ್ರೀ ಅನಂತಕುಮಾರರು ಇದನ್ನು ಖಂಡಿಸಿ ಪಾರ್ಲಿಮೆಂಟ್‌ನಲ್ಲಿ ಶ್ರೀ ಮನಮೋಹನ್ ಸಿಂಗ್ ಸರ್ಕಾರ ತೆಗೆದುಕೊಂಡ ನಿರ್ಧಾರ ಸರಿ ಎಂದು ಪ್ರತಿಪಾದಿಸಿದರು. ಅವರು ಪಕ್ಷದ ವಿರುದ್ಧ ಹೋದರೂ ಪ್ರಕೃತಿಯ ವಿರುದ್ಧ ಹೋಗಲಿಲ್ಲ.

ಅವರು ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ಸಚಿವರಾಗಿದ್ದಾಗ ರಾಮತೀರ್ಥ ಮತ್ತು ಸಂಕೋನಟ್ಟಿ ಗ್ರಾಮಗಳಲ್ಲಿ 200 ಗೊಬ್ಬರ ಅನಿಲ ಸ್ಥಾವರಗಳನ್ನು ಸ್ಥಾಪಿಸಿದರು. ಇಂದು ಬೆಳಗಾವಿ, ಬಿಜಾಪುರ, ಬೀದರ್ ಜಿಲ್ಲೆಗಳಲ್ಲಿ ಸುಮಾರು 50000 ಗೊಬ್ಬರ ಅನಿಲ ಸ್ಥಾವರಗಳು ಸ್ಥಾಪಿತವಾಗಿದ್ದು ಅಲ್ಲಿ ಹಸಿರು ಪುನಶ್ಚೇತನ, ಅಂತರ್ಜಲ ಪುನಶ್ಚೇತನ ಆಗಿರುವುದು ಕಂಡುಬರುತ್ತದೆ. ಬೆಂಗಳೂರು ನಗರದಲ್ಲಿ "ಹಸಿರು ಭಾನುವಾರ" ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಪ್ರತಿ ಭಾನುವಾರ ಸಾಮೂಹಿಕವಾಗಿ ಎಲ್ಲರೂ ಒಂದೊಂದು ಗಿಡ ನೆಡುವ ಈ ಕಾರ್ಯಕ್ರಮ ಇಂದಿಗೂ ನಡೆದುಕೊಂಡು ಬರುತ್ತಿದೆ. ಗಿಡ ನೆಡುವುದಕ್ಕಿಂತ ಹೆಚ್ಚಾಗಿ ಜನರಲ್ಲಿ ಪರಿಸರ ಕಾಳಜಿಯನ್ನು ಮೂಡಿಸುವುದು ಅವರ ಉದ್ದೇಶವಾಗಿತ್ತು. ಹಸಿರು ಭಾನುವಾರ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಪರಿಸರ, ಅರಣ್ಯ ಪರಿಸರಗಳ ಸಂರಕ್ಷಣೆ ನಡೆಯದಿದ್ದರೆ ಕಾವೇರಿ, ಅರ್ಕಾವತಿ ಮುಂತಾದ ನದಿಗಳು ಪೂರ್ಣ ಪ್ರಮಾಣದಲ್ಲಿ ಹರಿಯದೆ ಬದುಕು ಕಷ್ಟವಾಗುತ್ತದೆ, ಬೆಂಗಳೂರಿಗೆ ಕುಡಿಯುವ ನೀರು ಲಭಿಸುವುದು ಅಸಾಧ್ಯ ಎಂದು ಯಾವಾಗಲೂ ಅವರು ಹೇಳುತ್ತಿದ್ದರು.

ಕಣ್ಣೂರು ಮತ್ತು ಮೈಸೂರು ನಗರಗಳ ನಡುವಣ ರೈಲು ಮಾರ್ಗದ ಯೋಜನೆಯನ್ನು ಸರಕಾರವು ಕೈಬಿಡುವಂತೆ ಮಾಡಲು ಶ್ರೀ ಅನಂತಕುಮಾರರು ಶ್ರಮ ವಹಿಸಿದ್ದರು. ತನ್ಮೂಲಕ ಕೊಡಗಿನಲ್ಲಿ ಈಗಾಗಲೇ ಹಾಳಾಗಿರುವ ಪರಿಸರವನ್ನು ಇನ್ನಷ್ಟು ವಿನಾಶದಿಂದ ಉಳಿಸಿದ ಶ್ರೇಯಸ್ಸು ಅನಂತಕುಮಾರರಿಗೆ ಸಲ್ಲುತ್ತದೆ.

(ಸೌಜನ್ಯ: ಆಕಾಶವಾಣಿ, ಮೈಸೂರು)

# ನಾಡು ನುಡಿಗಳ ಅಭಿಮಾನ

ಟಿ. ಎಸ್. ಗೋಪಾಲ್



ಭಾರತೀಯರಾದ ನಾವು ನಮ್ಮ ದೇಶವನ್ನು ಎಂದೂ ಒಂದು ಭೌಗೋಳಿಕ ವಿಸ್ತೀರ್ಣ ಮಾತ್ರ ಎಂದು ಭಾವಿಸಿರಲಿಲ್ಲ. ಇಡೀ ಜಗತ್ತಿನಲ್ಲೇ ಅತಿ ವಿಶಿಷ್ಟವಾದ ಸಂಸ್ಕೃತಿಯ ವಿಸ್ತಾರವಾದ ಭೂಮಿಕೆ ನಮ್ಮ ಭಾರತ ಎಂದು ನಾವು ಪರಿಭಾವಿಸಿದ್ದೇವೆ. ಭಕ್ತಿ ಗೌರವಗಳಿಂದ ಈ ಭರತ ಭೂಮಿಗೆ ನಮ್ಮ ಧನ್ಯತಾಭಾವವನ್ನು ಸಮರ್ಪಿಸುತ್ತಿದ್ದೇವೆ. ಅನೇಕತೆಯಲ್ಲಿ ಏಕತೆಯನ್ನು ಮೆರೆಯುವ ಭಾರತವು ಹಲವು ನಾಗರಿಕತೆಗಳ, ಆಚಾರವಿಚಾರಗಳ, ಭಾಷೆಯ ನುಡಿಗಟ್ಟುಗಳ ಮಾಲೆ ಎಂದು ಹೇಳಬಹುದು. ಹೀಗಾಗಿ ಸಮಗ್ರ ಭಾರತದ ಬಗೆಗಿನ ನಮ್ಮ ಗೌರವ, ಆದರ, ಅಭಿಮಾನಗಳೆಲ್ಲ ನಮ್ಮ ನಮ್ಮ ನಿರ್ದಿಷ್ಟ ಪ್ರಾಂತ್ಯ, ಆಡುನುಡಿಗಳಿಗೂ ಕೂಡ ಸಲ್ಲುತ್ತವೆ. ಸಮಗ್ರ ಭಾರತೀಯತೆಯನ್ನು ಬಿಟ್ಟುಕೊಡದೆ ಆಯಾ ರಾಜ್ಯ, ಸ್ಥಳೀಯ ಭಾಷೆ, ಸಮುದಾಯಗಳ ವಿಶಿಷ್ಟತೆಯನ್ನು ಉಳಿಸಿಕೊಂಡು ಮುನ್ನಡೆಯುತ್ತಿರುವುದೇ ನಮ್ಮ ಹೆಗ್ಗಳಿಕೆ ಎಂದು ಹೇಳಬಹುದು.

ಈ ನಾಡುನುಡಿಗಳ ಅಭಿಮಾನವೆನ್ನುವುದು ಜನಸಾಮಾನ್ಯರ ಮನಸ್ಸು, ವರ್ತನೆಗಳಲ್ಲಿ ತೋರಿಬರುವುದು ಎಷ್ಟು ಮುಖ್ಯವೋ ನಮ್ಮ ಜನಪ್ರತಿನಿಧಿಗಳ, ವಿವಿಧ ಸಮುದಾಯಗಳ ಮುಖಂಡರ, ರಾಜಕೀಯ ಧುರೀಣರ ವ್ಯವಹಾರ ಕಾರ್ಯಕ್ಷೇತ್ರಗಳಲ್ಲಿಯೂ ಕೂಡ ಇದೇ ನಾಡುನುಡಿಗಳ ಅಭಿಮಾನ ತೋರ್ಪಟ್ಟು ಹೊಮ್ಮಿಬರುವುದು ಅಷ್ಟೇ ಮುಖ್ಯ ಎಂದು ನಾನು ಭಾವಿಸುತ್ತೇನೆ. ಈ ಅಭಿಮಾನ, ಆತ್ಮಗೌರವಗಳು ಜನನಾಯಕರಲ್ಲಿ ಹೆಚ್ಚಿದಷ್ಟೂ ಆಯಾ ರಾಜ್ಯ, ರಾಜ್ಯಭಾಷೆಗಳು ಅಭಿವೃದ್ಧಿ ಹೊಂದುವುದು ಸಾಧ್ಯ. ಸಮಗ್ರ ಭಾರತವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡ ಮಾತ್ರಕ್ಕೆ ರಾಜ್ಯ, ಸ್ಥಳೀಯ ಭಾಷೆಗಳ ಹಿತಾಸಕ್ತಿಗಳು ಅವಗಣಿತವಾಗುತ್ತದೆ ಎಂದು ಭಾವಿಸಬಾರದು. ರಾಜ್ಯ, ಸ್ಥಳೀಯ ಭಾಷೆಯ ಪರ ನಿಲ್ಲುವುದು ಸಂಕುಚಿತ ಭಾವನೆ ಎಂದು ಯಾರೂ ಹೇಳಬಾರದು.

ತನ್ನ ಊರು, ರಾಜ್ಯ, ಭಾಷೆಗಳ ಹಿತ ಕಾಪಾಡದವನು ಸಮಗ್ರ ದೇಶದ ಹಿತವನ್ನು ಸಾಧಿಸಿಯಾನೇ ಎಂಬುವುದು ಒಂದು ಪ್ರಶ್ನೆ. ಖಂಡಿತ ಇಲ್ಲ, ಜನನಾಯಕರಾದವರು ರಾಷ್ಟ್ರೀಯ ಮಟ್ಟದಲ್ಲಿ ತಮ್ಮ ನಾಡು, ಭಾಷೆಗಳನ್ನು ಪ್ರತಿನಿಧಿಸುತ್ತಿರುವಾಗ ಪ್ರತಿಹಂತದಲ್ಲೂ ತಮ್ಮವರ ಹಿತ ಸಾಧಿಸಲು, ರಾಜ್ಯದ ಪ್ರಗತಿಪರ ಯೋಜನೆಗಳಿಗೆ ಕೇಂದ್ರದ ನೆರವು ಗಳಿಸಿಕೊಳ್ಳಲು ಸದಾ ತತ್ಪರರಾಗಿರಲೇಬೇಕು. ಉದಾಹರಣೆಗೆ, ಕೇಂದ್ರದಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರ ಇದ್ದ ಕಾಲದಲ್ಲಿ ಸುವರ್ಣ ಚತುಷ್ಪಥ ರಸ್ತೆ ಯೋಜನೆಗೆ ಸಿದ್ಧತೆ ನಡೆಸುತ್ತಿದ್ದ ಒಂದು ಸಂದರ್ಭ. ಆಗ ಕರ್ನಾಟಕ ರಾಜ್ಯವನ್ನು ಈ ರಸ್ತೆಗಳ ಪರಿಧಿಯಿಂದ ಹೊರಗಿಡಲಾಗಿತ್ತು. ಇದನ್ನು ಮನಗಂಡ ಆಗಿನ ಕೇಂದ್ರ ಸಚಿವ ಶ್ರೀ ಅನಂತಕುಮಾರರು ರಸ್ತೆಗಳ ಮಾರ್ಗದ ನಕ್ಷೆಗೆ ಹೊಸ ರೂಪವನ್ನು ನೀಡುವ ನೆಪದಲ್ಲಿ ಕರ್ನಾಟಕಕ್ಕೆ ನೂರಾರು ಕಿಲೋಮೀಟರುಗಳಷ್ಟು ರಾಷ್ಟ್ರೀಯ ಹೆದ್ದಾರಿ ಲಭ್ಯವಾಗುವಂತೆ ನೋಡಿಕೊಂಡರು. ನಾಡಿನ ಬಗ್ಗೆ ಅಭಿಮಾನ ಇದ್ದಾಗ ಮಾತ್ರ ಇಂತಹ ಒಂದು ಆಲೋಚನೆಯನ್ನು ಹೊಂದಿಸಿಕೊಳ್ಳುವುದು ಸಾಧ್ಯ. ಹಾಗೆಯೇ, ಅವರು ಕಾವೇರಿ, ಆಲಮಟ್ಟಿ ನೀರಾವರಿ ಯೋಜನೆಗಳಲ್ಲಿಯೂ ರಾಜ್ಯಕ್ಕೆ ಅನ್ಯಾಯ ಆಗದೇ ಇರುವ ಹಾಗೆ ಕಾವಲಿದ್ದರು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ, ಬೆಂಗಳೂರಿಗೆ ಮೆಟ್ರೋ ಸಾರಿಗೆ ಇವೆಲ್ಲ ಲಭ್ಯವಾಗುವಂತೆ ನೋಡಿಕೊಂಡರು.

ಹೀಗೆ ನಮ್ಮ ನಾಡುನುಡಿಗಳ ಅಭಿಮಾನ ಸದಾ ಜಾಗೃತವಾಗಿರಬೇಕು. ಇದು ಆತ್ಮಗೌರವದ ಸಂಕೇತ ಮಾತ್ರವಲ್ಲ, ಬಹುಕೋಟಿ ಜನಸಂಖ್ಯೆಯಿರುವ ಪ್ರಜಾಪ್ರಭುತ್ವದ ನಾಡಾದ ನಮ್ಮ ಭಾರತದಲ್ಲಿ ಹೀಗೆ ನಮ್ಮ ನಮ್ಮ ನಾಡು ನುಡಿಗಳ ವಿಶಿಷ್ಟತೆಯನ್ನು ಕಾಪಾಡಿಕೊಂಡು ನಮ್ಮ ಹಿತಾಸಕ್ತಿಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಕೂಡ ಮುಖ್ಯ. ಇಂದಿನ ಸ್ಪರ್ಧಾತ್ಮಕ ಕಾಲದಲ್ಲಿ ಇದು ಇನ್ನೂ ಹೆಚ್ಚು ಅವಶ್ಯಕ ಎಂದು ನಾನು ಭಾವಿಸುತ್ತೇನೆ. ಕನ್ನಡ ಭಾಷೆಯ ಬಗ್ಗೆ ಅಭಿಮಾನ ಇದ್ದರೆ ಮಾತ್ರ ನಮಗೆಲ್ಲರಿಗೂ ಕನ್ನಡ ಶಿಕ್ಷಣ ಮಾಧ್ಯಮ, ಕನ್ನಡ ರಂಗಭೂಮಿ, ಕನ್ನಡ ಚಿತ್ರರಂಗ, ಕನ್ನಡ ಸಾಹಿತ್ಯ, ಇವೆಲ್ಲವುಗಳ ಹಿರಿಮೆಯನ್ನು ಗುರುತಿಸಿ ಕನ್ನಡಪರ ನೀತಿಗಳನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವಾಗುತ್ತದೆ.

ನಮ್ಮ ರಾಜ್ಯದ ಜನರು, ಜನಪ್ರತಿನಿಧಿಗಳು ಕರ್ನಾಟಕದ ಹಿರಿಮೆ, ಕನ್ನಡ ಭಾಷೆಯ ಶ್ರೇಷ್ಠತೆಗಳನ್ನು ಮೆರೆಸಿದಲ್ಲದೇ ದೇಶದ ಇತರ ಭಾಗಗಳ ಜನರಾಗಲಿ, ಜಗತ್ತಿನ ಇತರ ದೇಶಗಳ ಜನರಾಗಲಿ, ಕೊನೆಗೆ ನಮ್ಮ ಕೇಂದ್ರ ಸರ್ಕಾರವೇ ಆಗಲಿ, ನಮ್ಮ ನಾಡುನುಡಿಗಳ ಹಿರಿಮೆಯನ್ನು ತಾವಾಗಿಯೇ ಗುರುತಿಸುತ್ತಾರೆ ಎಂದು ಹೇಳುವುದು ಸಾಧ್ಯವಿಲ್ಲ. ನಮ್ಮ ಅಗತ್ಯಕ್ಕಾಗಿ ನಾವು ಎಷ್ಟೇ ಭಾಷೆಗಳನ್ನು ಕಲಿತರೂ, ಎಷ್ಟೇ ಭಾಷೆಗಳಲ್ಲಿ ವ್ಯವಹರಿಸಿದರೂ ಬೇರೆ ಬೇರೆ ಪ್ರಾಂತ್ಯಗಳಿಗೆ ಹೋಗಿ ಅಲ್ಲಿ ವೃತ್ತಿಯನ್ನು ಕೈಗೊಂಡಿದ್ದರೂ ಕೂಡ ನಮ್ಮ ಮಾತಿನಲ್ಲಿ ಕನ್ನಡತನವಿರಲಿ, ನಮ್ಮ ಕ್ರಿಯಾಶೀಲತೆಯಲ್ಲಿ ನಾಡುನುಡಿಗಳ ಬಗೆಗಿನ ಅಭಿಮಾನ ಪ್ರಕಟವಾಗುವಂತಿರಲಿ. ಹಾಗಿದ್ದಾಗ ಮಾತ್ರ ನಮ್ಮ ನಾಡುನುಡಿಗಳ ಅಭಿಮಾನ ಎನ್ನುವ ಮಾತಿಗೆ ಅರ್ಥವಿರುತ್ತದೆ. ಜೊತೆಗೆ ನಮ್ಮ ನಾಡಿನ ಕ್ಷೇಮವನ್ನು ನಮ್ಮ ನುಡಿಯ ಏಳಿಗೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.

(ಸೌಜನ್ಯ: ಆಕಾಶವಾಣಿ, ಮೈಸೂರು)

# ಚಿಕ್ಕಬಳ್ಳಾಪುರ ಜಿಲ್ಲೆಯ ಕೆಲವು ದೇವಾಲಯಗಳು



## ದೇಗುಲದರ್ಶನ ಮಾಲಿಕೆ-೫











ದೇಗುಲ ದರ್ಶನ ಮಾಲಿಕೆಯಲ್ಲಿ ಈ ತಿಂಗಳು ನಾವು ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕೆಲವು ದೇವಾಲಯಗಳನ್ನು ಪರಿಚಯ ಮಾಡಿಕೊಳ್ಳೋಣ.

ಬೆಂಗಳೂರು ಗ್ರಾಮಾಂತರ  ಜಿಲ್ಲೆ ದೇವನಹಳ್ಳಿಯಿಂದ ೭ ಕಿ.ಮೀ ದೂರದಲ್ಲಿರುವ ಬೊಮ್ಮವಾರದಲ್ಲಿ ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಾಲಯವಿದೆ. ಈ ಸುಂದರವಾದ ಗುಡಿಯ ಗರ್ಭಗೃಹದಲ್ಲಿ ಎಂಟು ಅಡಿ ಎತ್ತರದ ಭವ್ಯವಾದ ಶಿವಲಿಂಗವಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೇ ಸೇರುವ ವಿಜಯಪುರದಲ್ಲಿ ಅನೇಕ ದೇವಾಲಯಗಳಿವೆ. ಇವುಗಳಲ್ಲಿ  ಎಲ್ಲಕ್ಕಿಂತ ಪುರಾತನವಾದ ಗುಡಿ ಓಂಕಾರೇಶ್ವರ. ಇದಲ್ಲದೆ,  ನಗರೇಶ್ವರ, ಆದಿನಾರಾಯಣ, ಶ್ರೀರಾಮ, ವೀರಭದ್ರ, ಸುಬ್ರಹ್ಮಣ್ಯ, ಚನ್ನಕೇಶವ, ಗಂಗಮ್ಮ, ಆಂಜನೇಯ ಮೊದಲಾದ ದೇಗುಲಗಳು ಸೇರಿವೆ. ೧೧ನೇ ಶತಮಾನದಿಂದ ವಿಜಯನಗರ ಕಾಲ ಮತ್ತು ಸ್ಥಳೀಯ ಪಾಳೇಗಾರರ ಆಳ್ವಿಕೆಯ ಕಾಲದವರೆಗೆ ಈ ದೇವಾಲಯಗಳ ಇತಿಹಾಸ ವಿಸ್ತೃತವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಿಂದ ಎರಡು ಕಿಮೀ ದೂರದಲ್ಲಿರುವ ವೀರಾಪುರದಲ್ಲಿರುವ ಗಣಪತಿಯ ವಿಗ್ರಹ ಭವ್ಯವಾದುದು.  ಇದೇ ಶಿಡ್ಲಘಟ್ಟ ತಾಲ್ಲೂಕಿನ ದೇವರ ಮಳ್ಳೂರು ದೇವಾಲಯಗಳ ಬೀಡು. ಇಲ್ಲಿ ಆತ್ಮಾರಾಮ, ಸೋಮೇಶ್ವರ, ಮಳ್ಳೂರಮ್ಮ ಮುಂತಾದ  ಗುಡಿಗಳಿವೆ. ಧ್ಯಾನಮುದ್ರೆಯಲ್ಲಿರುವ ಶ್ರೀರಾಮನ ಅಪೂರ್ವ ವಿಗ್ರಹ  ಆತ್ಮಾರಾಮನ ದೇವಾಲಯದಲ್ಲಿದೆ. ಗ್ರಾಮದೇವತೆ ಮಳ್ಳೂರಮ್ಮನ ಗುಡಿಯಲ್ಲಿ ಸಪ್ತಮಾತೃಕೆಯರ ಪೈಕಿ ಐದು ದೇವತೆಗಳ ಶಿಲ್ಪಗಳು, ಗಣಪತಿ, ಸುಬ್ರಹ್ಮಣ್ಯ ಮತ್ತಿತರ ಸಾವಿರ ವರುಷಗಳಿಗೂ ಹಿಂದಿನ ವಿಗ್ರಹಗಳನ್ನು ದರ್ಶಿಸಬಹುದು.  ಸೋಮೇಶ್ವರ ಗುಡಿಯಲ್ಲಿರುವ ತಂಬೂರಿ ಹಿಡಿದ ಆಂಜನೇಯ ಮತ್ತು ಸೂರ್ಯನ ಶಿಲ್ಪಗಳು ದರ್ಶನೀಯವಾಗಿವೆ.

ಮುಂದೆ, ಚಿಂತಾಮಣಿ ತಾಲೂಕು ಯಗವಕೋಟೆಯಲ್ಲಿ ವೀರನಾರಾಯಣನ ದೇವಾಲಯದಲ್ಲಿರುವ  ನಾರಾಯಣನ ಮೂರ್ತಿ ಬಹು ವಿಶಿಷ್ಟವಾದುದು. ಹೊಯ್ಸಳರ ಕಾಲಕ್ಕೆ ಸೇರಿರಬಹುದಾದ ಈ ಶಿಲ್ಪದ ಇಕ್ಕೆಲದಲ್ಲಿರುವ ಶ್ರೀದೇವಿ ಭೂದೇವಿಯರಲ್ಲದೆ, ಕಿರೀಟ ಮತ್ತು ವಕ್ಷಸ್ಥಲದಲ್ಲಿ  ಲಕ್ಷ್ಮಿಯರ ಉಬ್ಬುಶಿಲ್ಪಗಳನ್ನು ಮೂಡಿಸಿದೆ. ಹೀಗೆ, ಅಷ್ಟಲಕ್ಷ್ಮೀಸಮೇತನಾದ ನಾರಾಯಣನ ವಿಗ್ರಹ ಅಪೂರ್ವವೆಂದೇ ಹೇಳಬೇಕು.

ದೇವರಮಳ್ಳೂರಿನಿಂದ ೨೮ ಕಿಮೀ ದೂರದ ಮುರುಗಮಲ್ಲ ಬೆಟ್ಟದ ಮೇಲೆ ಇರುವ ಮುಕ್ತೇಶ್ವರ ದೇವಾಲಯ ಹತ್ತನೇ ಶತಮಾನದಷ್ಟು ಪುರಾತನವಾದುದು.

ಚಿಂತಾಮಣಿ ತಾಲೂಕಿನ ಆಲಂಬಗಿರಿಯಲ್ಲಿರುವ ವೆಂಕಟೇಶ್ವರ ದೇವಾಲಯ ಪ್ರಸಿದ್ಧವಾದುದು. ವಿಜಯನಗರದ ಅರಸರ ಕಾಲದಲ್ಲಿ ಕಟ್ಟಲಾದ ದೊಡ್ಡ ದೇವಾಲಯವಿದು.

ಆಲಂಬಗಿರಿಯಿಂದ ೨೦ ಕಿಮೀ ದೂರದ ಸುಗಟೂರಿನಲ್ಲಿ ಚೋಳರ ಕಾಲದ ಸೋಮೇಶ್ವರ ದೇವಾಲಯವಿದೆ.

**ಕೆಂಗೇರಿ ಚಕ್ರಪಾಣಿ/ಟಿ.ಎಸ್. ಗೋಪಾಲ್**

ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಿ

**http://YouTube.com/AnanthkumarPratishthana**





# ಜನನಾಯಕನ ಲಕ್ಷಣಗಳು

ಪದ್ಮಶ್ರೀ ಡಾ. ದೊಡ್ಡರಂಗೇ ಗೌಡ

ಒಬ್ಬ ಜನನಾಯಕನಲ್ಲಿ ಇರಬೇಕಾದಂತಹ ಗುಣಲಕ್ಷಣಗಳು ಏನು? ಯಾವ ಯಾವ ಕಾರಣಗಳಿಂದ ಅವರನ್ನು ನಾವು ಜನನಾಯಕರು ಎಂದು ಪರಿಗಣಿಸಿ ಒಪ್ಪಿಕೊಳ್ಳುತ್ತೇವೆ? ಇವು ಮೊದಲ ನೋಟಕ್ಕೆ ಸರಳವಾಗಿ ಕಂಡರೂ ಉತ್ತರಿಸಲು ಕಠಿಣವಾದ ಪ್ರಶ್ನೆಗಳು. ಹಾಗೆ ನೋಡಿದರೆ, ಯಾರು ನಮ್ಮ ರಾಷ್ಟ್ರದಲ್ಲಿ ಜನಾನುರಾಗಿಯಾಗಿರುತ್ತಾರೆಯೋ, ಯಾರು ನಮ್ಮ ಪ್ರಾಂತ್ಯದಲ್ಲಿ ಜನಾನುರಾಗಿಯಾಗಿರುತ್ತಾರೆಯೋ, ಯಾರು ನಮ್ಮ ರಾಜ್ಯದಲ್ಲಿ ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆಯೋ, ಅವರೆಲ್ಲರೂ ಜನನಾಯಕರೇ.

ಜನನಾಯಕನಿಗೆ ಬೇಕಾಗಿರುವ ಬಹಳ ಮುಖ್ಯಗುಣ, ಇನ್ನೊಬ್ಬರ ಮಾತುಗಳನ್ನು ಆಲಿಸುವುದು, ಇನ್ನೊಬ್ಬರ ನೋವುಗಳಿಗೆ ಸ್ಪಂದಿಸುವುದು, ಅವರ ಅಗತ್ಯಗಳೇನು ಎಂದು ಪರಿಶೀಲಿಸುವುದು. ಅವರ ಸಂಕಷ್ಟಗಳಲ್ಲಿ ತಾನೂ ಭಾಗಿಯಾಗುವುದು, ಮಾರ್ಗದರ್ಶನ ನೀಡುವುದು ನೈತಿಕ ಬೆಂಬಲವನ್ನು ಕೊಡುವುದು. ಇದು ಪ್ರಾಮಾಣಿಕತೆಯ ಪ್ರಶ್ನೆ ಕೂಡ ಹೌದು. ಯಾವುದೇ ದೇಶಪ್ರೇಮಿ ಸಾಮಾನ್ಯವಾಗಿಯೇ ಪ್ರಾಮಾಣಿಕನಾಗಿರುತ್ತಾನೆ. ಆತ ರಾಷ್ಟ್ರದ ಬಗೆಗೆ ಉನ್ನತವಾದ ಭಾವನೆಗಳನ್ನು ಹೊಂದಿರುತ್ತಾನೆ. ಒಬ್ಬ ರಾಷ್ಟ್ರಮಟ್ಟದ ನಾಯಕನಿಗೆ ಚಿಂತನಶೀಲತೆ ಬೇಕಾಗುತ್ತದೆ, ಹೊಂದಾಣಿಕೆ ಬೇಕಾಗುತ್ತದೆ, ದೇಶದ ಆಗುಹೋಗುಗಳ ದರ್ಶನ ಬೇಕಾಗುತ್ತದೆ. ಅವನಿಗೆ ಪರಂಪರೆಯ ಅರಿವು ಬೇಕಾಗುತ್ತದೆ, ಇತಿಹಾಸದ ಪ್ರಜ್ಞೆ ಬೇಕಾಗುತ್ತದೆ ಮತ್ತು ಪ್ರಸ್ತುತ ಸ್ಥಿತಿಯನ್ನು ಎದುರಿಸುವ ಗುಣಗಳು ಅವನಲ್ಲಿ ಇರಬೇಕಾಗುತ್ತದೆ. ಬರೀ ಆದರ್ಶ ಚಿಂತನೆಗಳಿದ್ದರೆ ಸಾಲದು; ಕೇವಲ ಕನಸುಗಾರಿಕೆ ಇದ್ದರೆ ಸಾಲದು. ವಾಸ್ತವವನ್ನು ಅದರಲ್ಲೂ ರೂಕ್ಷ ವಾಸ್ತವವನ್ನು ಎದುರಿಸುವ, ನಿಭಾಯಿಸುವ, ಸಮಸ್ಯೆಗಳಿಗೆ ತಕ್ಕ ಪರಿಹಾರವನ್ನು ಕಂಡುಕೊಂಡು ಜನರಿಗೆ ಆ ಪರಿಹಾರವನ್ನು ಮುಟ್ಟಿಸುವ, ತನ್ಮೂಲಕ ಜನರ ಅಕ್ಕರೆ, ಪ್ರೀತಿ, ಸ್ನೇಹ, ವಿಶ್ವಾಸ ಎಲ್ಲವನ್ನು ಗಳಿಸುವ ವಿಶೇಷವಾದ ಗುಣಗಳು ಜನನಾಯಕನಲ್ಲಿ ಇರಬೇಕಾಗುತ್ತದೆ.



ಜನನಾಯಕನಲ್ಲಿ ದಿಟ್ಟತನ ಬೇಕು. ಕೈಗೆತ್ತಿಕೊಂಡ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸುವ, ಅಪೇಕ್ಷಿತ ಫಲಗಳನ್ನು ಅದರಲ್ಲೂ ಇತ್ಯಾತ್ಮಕ ಫಲಗಳನ್ನು ಪಡೆಯುವ ಮಹಾತ್ವಾಕಾಂಕ್ಷೆ ಇರಬೇಕು. ಬಹಳ ಮುಖ್ಯವಾಗಿ ದೇಶಸೇವೆ ಮಾಡುವ ಮನಸ್ಸು ಇರಬೇಕು. ನಮ್ಮ ನಾಯಕರಾದ ಶ್ರೀ ಅನಂತಕುಮಾರರು ಅಂತಹ ಜನನಾಯಕರು. ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಎಷ್ಟು ಇನಿದಾಗಿ ಅವರು ಕನ್ನಡವನ್ನು ಮಾತಾಡುತ್ತಿದ್ದರು ಎಂದರೆ ಅವರ ಮಾತುಗಳೆಲ್ಲ ವಾಗರ್ಥ ತುಂಬಿಕೊಂಡ ವಾಕ್ಯಗಳು. ಅವರು ಇಂಗ್ಲಿಷ್ ನಲ್ಲಿ ಕೂಡ ಅಷ್ಟೇ ಚೆನ್ನಾಗಿ ಮಾತಾಡುತ್ತಿದ್ದರು. ಹಿಂದಿಯನ್ನಂತೂ ನಿರರ್ಗಳವಾಗಿ ಮಾತನಾಡುತ್ತಿದ್ದರು. ಹೀಗಾಗಿ ಅವರು ಕರ್ನಾಟಕದ ಸಮಸ್ಯೆಗಳನ್ನು ಪ್ರಧಾನಿಯವರಿಗೆ ಪರಿಣಾಮಕಾರಿಯಾಗಿ ತಲುಪಿಸಲು ಯಶಸ್ವಿಯಾಗಿದ್ದರು.

ಇಂತಹ ಶ್ರೀ ಅನಂತಕುಮಾರರನ್ನು ನಾವು ಮರೆಯುವುದು ಸಾಧ್ಯವಿಲ್ಲ. ಅವರು ನಮ್ಮ ಬಡಾವಣೆಯಲ್ಲಿ ರಂಗಮಂದಿರ ಕಟ್ಟಿಸಿದ್ದಾರೆ, ರಸ್ತೆಗಳಿಗೆ ಹೆಸರಾಂತ ಸಾಹಿತಿಗಳ ಹೆಸರನ್ನು ಇಟ್ಟಿದ್ದಾರೆ. ಉಪವನಗಳಿಗೆ ಕೂಡ ಸಾಹಿತಿಗಳ ಹೆಸರನ್ನು ಇಟ್ಟಿದ್ದಾರೆ. ಅವೆಲ್ಲವೂ ಕೂಡ ಜನಪರವಾದ ಕಾರ್ಯಕ್ರಮಗಳು ಎಂದು ನಾನು ಭಾವಿಸುತ್ತೇನೆ. ಅವರ ಬಳಿಗೆ ಯಾರೇ ಹೋಗಲಿ, ಅವರ ಸಮಸ್ಯೆಗಳನ್ನು ಆಲಿಸಿ, ಅದಕ್ಕೆ ಆದ್ಯತೆ ನೀಡಿ ತಮ್ಮ ಸೇವೆಯನ್ನು ಒದಗಿಸುತ್ತಿದ್ದರು. ಇದು ಜನನಾಯಕನ ವಿಶೇಷವಾದ ಲಕ್ಷಣ. ಅವರ ವ್ಯಕ್ತಿತ್ವಕ್ಕೆ ನಾನು ಅಭಿವಂದಿಸುತ್ತೇನೆ.

# ಹಸಿರಿನ ಹರಿಕಾರ ಅನಂತಕುಮಾರ್

ಶ್ರೀಮತಿ ಲೀಲಾ ಬಸವರಾಜ್, ಸಾಮಾಜಿಕ ಕಾರ್ಯಕರ್ತರು

ಜೀವನದಲ್ಲಿ ಆರೋಗ್ಯ ಭಾಗ್ಯ ಬಹಳ ಮುಖ್ಯ. "ಅನ್ನ, ಅಕ್ಷರ, ಆರೋಗ್ಯ" ಎಂಬುದು ಅದಮ್ಯ ಚೇತನ ಸಂಸ್ಥೆಯ ಘೋಷವಾಕ್ಯ. ಶ್ರೀ ಅನಂತಕುಮಾರರು ಅದಮ್ಯ ಚೇತನ ಸಂಸ್ಥೆಯನ್ನು ಸ್ಥಾಪಿಸಿ ಆರೋಗ್ಯ ಸಂಪತ್ತು ಎಲ್ಲರಿಗೂ ಸಿಗುವಂತಾಗಬೇಕು ಎಂದು ಪಣತೊಟ್ಟವರು. ಜೀವನಾಧಾರವಾದ ಉಸಿರಾಟಕ್ಕೆ ಬಹಳ ಮುಖ್ಯವಾದ ಪರಿಶುದ್ಧವಾದ ಗಾಳಿ ದೊರೆಯುವಂತಾಗಬೇಕು ಎಂದು ಯೋಚಿಸಿ ಅದಕ್ಕಾಗಿ ಆಳವಾದ ಅಧ್ಯಯನ ಮಾಡಿ, ಸಾಕಷ್ಟು ಮಾಹಿತಿ ಸಂಗ್ರಹಿಸಿ ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರು. ಇವುಗಳಲ್ಲಿ "ಹಸಿರು-ಉಸಿರು, ಮರ ಬೆಳೆಸಿ, ನಾಡು ಉಳಿಸಿ, ಹಸಿರು ವನ, 1:1, ಸುಫಲಾಂ-ಸುಜಲಾಂ" ಯೋಜನೆಗಳು ಅತಿ ಮುಖ್ಯವಾದವುಗಳು.

ಭಾರತದ ಸ್ವಾತಂತ್ರ್ಯಕ್ಕಾಗಿ, ಭಾರತದ ಪ್ರಗತಿಗಾಗಿ ಹಲವಾರು ಆಂದೋಲನಗಳನ್ನೂ ಅದಮ್ಯಚೇತನ ಸಂಸ್ಥೆ ಕೈಗೆತ್ತಿಕೊಂಡಿದೆ. ಗಾಂಧೀಜಿಯವರ ಸತ್ಯಾಗ್ರಹ, ಮೋದಿಯವರ ಸ್ವಚ್ಛಾಗ್ರಹದ ಮಾದರಿಯಲ್ಲಿ ಪರಿಸರದ ಉಳಿವಿಗಾಗಿ, ಮರಗಿಡಗಳ ಉಳಿವಿಗಾಗಿ, ಜೀವನಾಧಾರವಾದ ಪರಿಶುದ್ಧ ಗಾಳಿಗಾಗಿ ಸಸ್ಯಾಗ್ರಹವನ್ನು ನಡೆಸಿಕೊಂಡು ಬರುತ್ತಿದೆ. ಈ ಹಸಿರು ಸಸ್ಯಾಗ್ರಹದ ಹರಿಕಾರ ಶ್ರೀ ಅನಂತಕುಮಾರ್.

ಅನಂತಕುಮಾರರ ಎಲ್ಲ ಕನಸುಗಳನ್ನು ನನಸು ಮಾಡಲು ಪಣತೊಟ್ಟು ನಿಂತಿರುವುದು ಅದಮ್ಯ ಸೇವಾಗ್ರಹ. ಅದಮ್ಯ ಚೇತನದ ಗ್ರೀನ್ ವಾರಿಯರ್ಸ್ ಪ್ರತಿ ಭಾನುವಾರ ನಗರದ ಬೇರೆ ಬೇರೆ ಕಡೆ ಉಪಯುಕ್ತವಾದ ಗಿಡಗಳನ್ನು ನೆಟ್ಟು ಪೋಷಿಸುತ್ತಿದ್ದಾರೆ. ಗಿಡನೆಡುವುದು ದೊಡ್ಡದಲ್ಲ, ಜನ್ಮವಿತ್ತ ಮಕ್ಕಳನ್ನು ತಾಯಿ ಪಾಲಿಸುವಂತೆ ನೆಟ್ಟ ಗಿಡಗಳಿಗೆ ನೀರು, ಗೊಬ್ಬರ ಹಾಕಿ ಬೆಳೆಸಬೇಕು.

"ಕಸದಿಂದ ರಸ" ಎಂಬ ಮರುಬಳಕೆ ಈ ಸೂತ್ರವನ್ನು ಅದಮ್ಯಚೇತನ ಸಂಸ್ಥೆ ಪಾಲಿಸುತ್ತಿದೆ. ಅದಮ್ಯ ಚೇತನದ ಅಡುಗೆ ಮನೆಯಲ್ಲಿ ತರಕಾರಿ, ಅಕ್ಕಿ, ಬೇಳೆ ಮುಂತಾದವುಗಳನ್ನು ತೊಳೆದ ನೀರನ್ನು ಟ್ಯಾಂಕ್ಟರುಗಳಲ್ಲಿ ತುಂಬಿಸಿ ಗಿಡಗಳಿಗೆ ನೀರು ಉಣಿಸಲಾಗುತ್ತಿದೆ. ಹಾಗೆಯೇ ಗೊಬ್ಬರವನ್ನು ಕೂಡ ಸಂಸ್ಥೆಯ ಸ್ವಯಂ ಸೇವಕರೇ ತಯಾರಿಸುತ್ತಾರೆ. ಯಾವುದೇ ಕಾರಣಕ್ಕೂ ಈ ಭಾನುವಾರದ ಆಂದೋಲನ ನಿಲ್ಲದೆ ಮುಂದುವರೆಯುತ್ತಿದೆ. ಇದು ಒಂದು ಹೆಗ್ಗಳಿಕೆಯೇ ಸರಿ.

# ಪಾಲಿಯೆಸ್ಟರ್ ಬಟ್ಟೆಯ ರೂಪಾಂತರಣ ಮತ್ತು ಮರುಬಳಕೆ (Reduce & Reuse)



ಪುಟ 2 ರಿಂದ ಮಾಡಿಕೊಳ್ಳಲಾಯಿತು. ಒಂದು ಸೀರೆಯನ್ನು ಸಂಸ್ಥೆಗೆ ತಂದು ಕೊಟ್ಟರೆ ಅದರಿಂದ ಆರು ಚೀಲಗಳನ್ನು ತಯಾರಿಸಿ ಅವುಗಳಲ್ಲಿ ಐದು ಚೀಲಗಳನ್ನು ಉಚಿತವಾಗಿ ವಿತರಣೆ ಮಾಡಿ ಒಂದು ಚೀಲವನ್ನು ಸೀರೆ ಕೊಟ್ಟವರಿಗೆ ಸ್ಮರಣಿಕೆಯ ರೂಪದಲ್ಲಿ ನೀಡುವುದು ಯೋಜನೆ. ಈ ಯೋಜನೆಯಲ್ಲಿ ಯಾವುದೇ ಲಾಭೋದ್ದೇಶವಿರಲಿಲ್ಲ. ಕೋವಿಡ್ ಆಗಮನಕ್ಕಿಂತ ಆರು ತಿಂಗಳು ಮೊದಲು ಸಂಸ್ಥೆಯು ಕರೆಕೊಟ್ಟಿತ್ತು. ಸಂಸ್ಥೆಯ ಮನವಿಗೆ ಓಗೊಟ್ಟ ನೂರಾರು ಜನರು ಸಾವಿರಾರು ಸೀರೆಗಳನ್ನು ತಂದು ನೀಡಿದರು. ಈ ಸೀರೆಗಳನ್ನು ಪರಿವರ್ತನೆ ಮಾಡಿ ಇದುವರೆಗೆ ಸುಮಾರು 3000 ಸಾವಿರಕ್ಕೂ ಹೆಚ್ಚು ಚೀಲಗಳನ್ನು ಸಂಸ್ಥೆಯು ತಯಾರಿಸಿ ವಿತರಿಸಿದೆ. 2006 ರಲ್ಲಿ ವೈಯಕ್ತಿಕ ನೆಲೆಯಲ್ಲಿ ಪ್ರಾರಂಭವಾದ ಈ ಯೋಜನೆ ಇಂದು ಈ ಮಟ್ಟಕ್ಕೆ ಬಂದು ನಿಂತಿದೆ.

ಮುಂದಕ್ಕೆ ಸೀರೆಗಳನ್ನು ಇತರ ರೀತಿಯಲ್ಲೂ ಬಳಸುವ ಯೋಚನೆ ಅದಮ್ಯ ಚೇತನ ಸಂಸ್ಥೆಗಿದೆ. ಇವುಗಳಿಂದ ದುಪ್ಪಟ್ಟಿ, ರಜಾಯಿಗಳನ್ನು ತಯಾರಿಸುವುದು ಮುಂದಿನ ಯೋಜನೆ. ಈ ದುಪ್ಪಟ್ಟಿಗಳನ್ನು ಸರಕಾರೀ ಆಸ್ಪತ್ರೆಯಲ್ಲಿ ಹುಟ್ಟುವ ಹೆಣ್ಣು ಮಕ್ಕಳಿಗೆ ವಿತರಿಸುವುದು ಉದ್ದೇಶ. ಇದೀಗ ನವಜಾತ ಶಿಶುಗಳಿಗೆ ಅಗತ್ಯವಿರುವ ಪುಟ್ಟ ಪುಟ್ಟ ಬಣ್ಣ ಬಣ್ಣದ ರಜಾಯಿಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ. ಇದನ್ನು ತನ್ನ "ಧರ್ಮ" ಎಂದು ಭಾವಿಸಿರುವ ಸಂಸ್ಥೆಯು ಈ ಮೂಲಕ ದಾನಿಗಳನ್ನು ಅರ್ಹ ಫಲಾನುಭವಿಗಳೊಂದಿಗೆ ಸಂಯೋಜಿಸುವ ಗುರಿಯನ್ನು ಹೊಂದಿದೆ.

ಪಾಲಿಯೆಸ್ಟರ್, ನೈಲಾನು ಬಟ್ಟೆಗಳನ್ನು ಸಂಪೂರ್ಣ ನಿರ್ಮೂಲನೆ ಮಾಡುವುದು ಅಸಾಧ್ಯವಾದರೆ ರೂಪಾಂತರ ಮಾಡುವ ಮೂಲಕ ಬಳಕೆಯ ಅವಧಿಯನ್ನು ವಿಸ್ತರಿಸಿ ಅಷ್ಟರ ಮಟ್ಟಿಗೆ ಅವು ಮಣ್ಣಿಗೆ ಸೇರುವುದನ್ನು ನಿಧಾನಿಸಬಹುದು. ಈ ನಿಟ್ಟಿನಲ್ಲಿ ಎಲ್ಲ ಪರಿಸರವಾದಿಗಳ, ಸಮಾನ ಮನಸ್ಕರ ಗಮನವನ್ನು ಸೆಳೆಯುವಂತಾಗಲೆಂದು ಅದಮ್ಯ ಚೇತನವು ಆಶಿಸುತ್ತದೆ.

ಸಸ್ಯಲೋಕ ಪರಿಚಯ ಮಾಲಿಕೆ - 3

# ಕೃಷ್ಣ ಆಲದ ಮರ



ನಮಗೆ ಪರಿಚಿತವಾದ ಆಲದ ಮರವು ಮೊರೇಸೀ ಕುಟುಂಬಕ್ಕೆ ಸೇರಿದ ಫೈಕಸ್ ಬೆಂಗಾಲೆನ್ಸಿಸ್ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಇದೇ ಫೈಕಸ್ (ಆಲ) ಪ್ರಭೇದಕ್ಕೆ ಸೇರಿದ ಕೃಷ್ಣ ಆಲ _ ಎಂಬ ಬಗೆಯ ಮರವನ್ನು ಪರಿಚಯ ಮಾಡಿಕೊಳ್ಳೋಣ. ಇದನ್ನು ಫೈಕಸ್ ಕೃಷ್ಣೆ ಎಂಬ ಭಿನ್ನರೀತಿಯ ಪ್ರಭೇದವೆಂದು ಕರೆಯುವುದೂ ಇದೆ. ಕೊಡೆಯಾಕಾರದ ಹಂದರವುಳ್ಳ ಸುಂದರವಾದ ಮರವಾದ್ದರಿಂದ ಇದನ್ನು ಉದ್ಯಾನವನಗಳಲ್ಲಿ ಅಲಂಕಾರ ಸಸ್ಯವನ್ನಾಗಿ ಬೆಳೆಸುತ್ತಾರೆ.

ಆಲದ ಮರಗಳನ್ನು ಎಲ್ಲ ಲಕ್ಷಣಗಳಲ್ಲಿ ಹೋಲುವ ಈ ಮರದ ವಿಶೇಷವೇನೆಂದರೆ, ಬಟ್ಟಲಿನಾಕಾರದ ತನ್ನ ಎಲೆಗಳಿಂದಾಗಿ ಇದು ಸಾಮಾನ್ಯವಾದ ಆಲದ ಮರಕ್ಕಿಂತ ಭಿನ್ನವಾಗಿದೆ.

ಆಲದ ಮರದ ಬಿಳಲುಗಳು ಹೆಚ್ಚಾಗಿ ಭೂಮಿಯಲ್ಲಿ ಹೋಗಿ ಹೊಸ ಮರಗಳು ಹುಟ್ಟುತ್ತವೆ . ಆದರೆ ಕೃಷ್ಣ ಆಲ ಗಿಡದ ರೆಂಬೆಗಳು ಭೂಮಿಯತ್ತ ಬಾಗಿ ಮಣ್ಣಲ್ಲಿ ಸೇರಿ ತಿರುಗಿ ಹೊಸ ಗಿಡ ಹುಟ್ಟುತ್ತದೆ. ಈ ಸಸ್ಯವಿನ್ಯಾಸದ ಸೊಬಗು ಮನಸ್ಸನ್ನು ಸೆಳೆಯುತ್ತದೆ.



ಮಕ್ಕಳಿಗೆ ಮರಕೋತಿಯಾಟ ಆಡಲು ಹೇಳಿ ಮಾಡಿಸಿದ ಮರವಿದು. ಎರಡು ವರ್ಷದ ಪುಟ್ಟ ಮಗುವೂ ಕೂಡ ಈ ಮರವನ್ನು ಏರಬಹುದು.

ಕೃಷ್ಣ ಆಲದ ಮರವು ಭಾರತದ ಮೂಲವಾಸಿಯಾದರೂ ಬಹಳ ವಿರಳವಾಗಿ ಕಾಣಸಿಗುತ್ತದೆ. ಬೆಂಗಳೂರಿನ ಲಾಲ್ ಬಾಗಿನಲ್ಲಿ ಈ ಮರವನ್ನು ಬೆಳೆಸಿದ್ದಾರೆ. ಮರದ ಬುಡ ಹಾಗೂ ರೆಂಬೆಗಳು ಒರಟು. ಎಲೆಗಳು ಸರಳ ಮಾದರಿಯವು. ಅವಕ್ಕೆ ಉದ್ದನೆಯ ತೊಟ್ಟಿದೆ. ಎಲೆಯ ಬುಡ ಬಟ್ಟಲಿನಂತೆ ಮಡಿಚಿಕೊಂಡಿದೆ. ಎಲೆಯ ಮೇಲ್ಭಾಗ ಹಸುರು, ತಳಭಾಗ ಹಳದಿ ಮಿಶ್ರಿತ ಹಸಿರು. ಹಣ್ಣುಗಳು ಸಾಮಾನ್ಯವಾಗಿ ಎಲೆಗಳ ಕಂಕುಳಲ್ಲಿ ಜೊತೆಜೊತೆಯಾಗಿರುತ್ತವೆ. ಗುಂಡಾಗಿರುವ ಇವುಗಳ ಮೇಲೆ ತೆಳುವಾದ ಹಾಗೂ ಮೃದುವಾದ ಕೂದಲುಗಳಿವೆ.

ಪವಿತ್ರವಾದ ಮರವೆಂದು ಪರಿಗಣಿಸಲಾಗಿರುವ ಕೃಷ್ಣ ಆಲ ಹಲವಾರು ದಂತಕತೆಗಳಿಗೆ ಕಾರಣವಾಗಿದೆ. ಶ್ರೀಕೃಷ್ಣನ ಬಾಯಾರಿಕೆಯನ್ನು ನೀಗಲು ಇಬ್ಬನಿಯನ್ನು ಸಂಗ್ರಹಿಸುವುದಕ್ಕೋಸ್ಕರ ಇದರ ಎಲೆಗಳು ಬಟ್ಟಲಿನಂತಿವೆ ಎಂದು ಒಂದು ಕತೆಯಿದ್ದರೆ ಬಾಲಕೃಷ್ಣ ಬೆಣ್ಣೆ ತಿನ್ನಲು ಹಾಗೂ ಗೆಳೆಯರಿಗೆ ಬೆಣ್ಣೆ ಹಂಚಲು, ಬಟ್ಟಲಿನಂತೆ ಇರುವ ಇದರ ಎಲೆಗಳನ್ನು ಉಪಯೋಗಿಸಿದ ಎಂದು ಇನ್ನೊಂದು ಕತೆಯಿದೆ.



ಈ ಸುಂದರ ವೃಕ್ಷವನ್ನು ತೋಟಗಾರಿಕೆ ಇಲಾಖೆಯವರು ಲಾಲ್ ಬಾಗಿನಲ್ಲಿ ಅನೇಕ ಕಡೆ ಬೆಳೆಸುತ್ತಿದ್ದು, ನೀವು ಅತ್ತ ಹೋದಾಗ ಗಮನಿಸಿ ನೋಡಿ.

ಈ ವೃಕ್ಷದ ಔಷಧೀಯ ಗುಣಗಳು ಅನೇಕ. ಆದರೂ ದೇವರ ಗಿಡವೆಂದು ಇದನ್ನು ಹೆಚ್ಚಾಗಿ ಕಡಿಯುವುದಿಲ್ಲ. ಮಕ್ಕಳನ್ನು ಕಾಡುವ ವ್ಯಾಧಿಗಳ ಚಿಕಿತ್ಸೆಗಾಗಿ ಈ ಮರದ ಎಲೆಗಳನ್ನು ಉಪಯೋಗಿಸುತ್ತಾರೆ.

ಅತ್ಯಂತ ಅಪರೂಪವಾಗಿರುವ ಈ ಮರವು ವಿನಾಶದ ಅಂಚಿನಲ್ಲಿದೆ. ಸಾಧ್ಯವಾದಲ್ಲಿ ಈ ಸಸ್ಯವನ್ನು ನಮ್ಮ ಜಮೀನುಗಳಲ್ಲಿ, ತೋಟದ ಬದಿಗಳಲ್ಲಿ ನೆಟ್ಟು ಬೆಳೆಸೋಣ.



**ಛಾಯಾ ಓಕ್ ಬಾಪಟ್**

# 'ಪ್ರಧಾನಿಯಾಗುವ ಅರ್ಹತೆಯಿದ್ದ ಧುರೀಣ'

ಪುಟ 3 ರಿಂದ **ವಿನಯಶೀಲ ವಿದ್ವತ್ತು**

ಇಷ್ಟೆಲ್ಲ ಒತ್ತಡಗಳ ನಡುವೆಯೂ ಅವರು ಕವನ ಬರೆಯುತ್ತಿದ್ದರು. ನಮ್ಮ ಅನಂತಕುಮಾರ್ ಎಂಬ ಪತ್ರಿಕೆಯಲ್ಲಿ ಓದುಗರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುತ್ತಿದ್ದರು. ಎಷ್ಟು ಜವಾಬ್ದಾರಿ ಹೊರಿಸಿದರೂ ಎಷ್ಟೇ ಕೆಲಸಗಳು ಎದುರಾದರೂ ಎಲ್ಲವನ್ನೂ ಕುಶಲತೆಯಿಂದ ನಿರ್ವಹಿಸಿದರು, ಅನಂತಕುಮಾರ್. ಯಾವುದೇ ಸಭೆ, ಸಮಾರಂಭಗಳಲ್ಲಿ ಚಿಕ್ಕ ಮಕ್ಕಳೂ ಸೇರಿದಂತೆ ಎಲ್ಲರನ್ನೂ ಅವರಿಗೆ ಸಮಾಧಾನವಾಗುವ ಹಾಗೆ ಮಾತನಾಡುವ ಚಾತುರ್ಯ ಅವರಲ್ಲಿತ್ತು. ವೆಂಕಟ ಸುಬ್ಬಯ್ಯನವರ ಹತ್ತಿರ ಅನಂತಕುಮಾರ್ ವಿನಯದಿಂದ ಮಾತನಾಡುವಾಗ ಅವರ ಕಣ್ಣುಗಳಲ್ಲಿ ನೀರು ಬರುತ್ತಿತ್ತು ಎಂದು ಕೇಳಿದ್ದೆ. ಹಿರಿಯರೊಂದಿಗೆ ಮಾತನಾಡುವಾಗ ಇವರು ತೋರಿಸುವ ವಿನಯ, ವಿನಮ್ರತೆಗಳು ಅನೇಕ ಹಿರಿಯರ ಮೇಲೆ ಪ್ರಭಾವ ಬೀರಿದ್ದವು.

ಅನಂತಕುಮಾರರು ಸಂಸತ್ತಿನಲ್ಲಿ ನಡೆದುಕೊಂಡ ರೀತಿ, ಅವರ ಪಕ್ಷಾತೀತವಾದ ಸ್ನೇಹ ಎಲ್ಲರಿಗೂ ಮೆಚ್ಚುಗೆಯಾಗಿದ್ದವು. ಪಕ್ಷದ ಕಾರ್ಯಕರ್ತರಿಗೆ ಅವರು ಅಚ್ಚುಮೆಚ್ಚಿನ ನಾಯಕರಾಗಿದ್ದರು. ಅವರು ತಾವೊಬ್ಬ ನಾಯಕ ಎಂದು ಎಂದಿಗೂ ಭಾವಿಸಿರಲಿಲ್ಲ. ದೊಡ್ಡ ಸಭೆಗಳೇ ಇರಲಿ, ಸಣ್ಣ ಮೀಟಿಂಗುಗಳೇ ಇರಲಿ, ಅನಂತಕುಮಾರರು ಕಾರ್ಯಕರ್ತರಿಗೆ ತೋರಿಸುತ್ತಿದ್ದ ಆತ್ಮೀಯತೆ, ಅವರಿಂದ ಕೆಲಸ ಮಾಡಿಸುತ್ತಿದ್ದ ರೀತಿ ಅವಿಸ್ಮರಣೀಯವಾಗಿದೆ.

ಅನಂತಕುಮಾರರ ಜೀವನ ಘಟನೆಗಳ ಸರಮಾಲೆಯಿಂದ ತುಂಬಿಕೊಂಡಿದೆ. ಹಗಲು, ಇರುಳೆನ್ನದೆ ಸಾಮಾನ್ಯ ಜನರ ಕೆಲಸ ಮಾಡಿದ ಅವರ ಜೀವನ ಚರಿತ್ರೆಯನ್ನು ಅನಂತ ಪಥ ಪತ್ರಿಕೆ ಧಾರಾವಾಹಿಯಾಗಿ ಪ್ರಕಟಿಸಬೇಕು. ಪ್ರತಿಭಾವಂತರು ಮತ್ತು ಪ್ರತಿಭಾಶಾಲಿಗಳೆಂದರೆ ಮೃತ್ಯುವಿಗೆ ಪ್ರಿಯವಂತೆ. ಅನಂತ ಕುಮಾರರಂತಹ ಮಹಾತ್ಮರು (ಅವರು ಮಹಾತ್ಮರೆಂದು ಕರೆಯಲು ನನಗೆ ಯಾವ ಸಂಕೋಚವೂ ಇಲ್ಲ) ನಮ್ಮ ನಡುವೆ ಇನ್ನಷ್ಟು ಕಾಲ ಇರಬೇಕಿತ್ತು. ಅವರ ನೆನಪುಗಳನ್ನು ಸಜೀವವಾಗಿರಿಸುವ ಉತ್ತಮ ಕೆಲಸವನ್ನು ಅನಂತಪಥ ಪತ್ರಿಕೆ ಮಾಡುತ್ತಿದೆ. ಅನಂತಕುಮಾರರ ನೆನಪಿಗೆ ನನ್ನ ನಮಸ್ಕಾರಗಳು.

ವ್ಯಕ್ತಿ ವಿಶೇಷ ಮಾಲಿಕೆ

# ಕರ್ನಾಟಕದಲ್ಲಿ ಸಂಘದ ಪ್ರವರ್ತಕ ಯಾದವರಾವ್ ಜೋಷಿ



ನಮಸ್ತೇ ಸದಾ ವತ್ಸಲೇ ಮಾತೃಭೂಮೇ
ತ್ವಯಾ ಹಿಂದುಭೂಮೇ ಸುಖಂ ವರ್ಧಿತೋಹಮ್

ಮೇಲಿನ ಎರಡು ಸಾಲುಗಳು ಅನುರಣಿಸುವಾಗ ಸಮಸ್ತ ಭಾರತೀಯರ ನರನರಗಳು ಹುರಿಗೊಳ್ಳುತ್ತವೆ, ಎದೆಯುಬ್ಬಿ ಬರುತ್ತದೆ. ಹೀಗಿರುವಾಗ ಇದಕ್ಕೆ ಮೊತ್ತಮೊದಲು ವೀರವ್ರತದ ರಾಗ ತೊಡಿಸಿ ಹಾಡಿದವರಿಗೆ ಅದೆಷ್ಟು ರೋಮಾಂಚನವಾಗಿರಬಹುದು! ೧೯೪೦ರ ಮೇ ೧೮ ರಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪುಣೆ ವರ್ಗದಲ್ಲಿ ಇದನ್ನು ಹಾಡಿದವರು ಶ್ರೀ ಯಾದವರಾವ್ ಜೋಷಿಯವರು.

ನಾಗಪುರದ ಸುಸಂಸ್ಕೃತ ಮನೆತನದ ಏಕೈಕ ಉತ್ತರಾಧಿಕಾರಿಯಾಗಿದ್ದ ಜೋಷಿಯವರಿಗೆ ಸಂಗೀತವು ಹುಟ್ಟಿನಿಂದಲೇ ಬಳುವಳಿಯಾಗಿ ಬಂದಿತ್ತು. ೧೯೧೪ ರ ಸೆಪ್ಟೆಂಬರ್ ೩, ಪಾವನವಾದ ಅನಂತ ಚತುರ್ದಶಿಯ ದಿನದಂದು ಕೃಷ್ಣ ಜೋಷಿ ಮತ್ತು ಸತ್ಯಭಾಮಾ ದಂಪತಿಗಳ ಮಗನಾಗಿ ಜನಿಸಿದ ಯಾದವನನ್ನು ಆತನ ಬಾಲ್ಯದಲ್ಲಿಯೇ "ಸಂಗೀತ ಬಾಲ ಭಾಸ್ಕರ" ಎಂದು ಜನರು ಗುರುತಿಸುತ್ತಿದ್ದರು. ಶಂಕರರಾವ್ ಪ್ರವರ್ತಕರೆಂಬ ಪ್ರಸಿದ್ಧ ಗುರುಗಳ ಮಾರ್ಗದರ್ಶನದಲ್ಲಿ ಗಾಯನಕಲೆಯನ್ನು ಅಭ್ಯಸಿಸತೊಡಗಿದ ಬಾಲಕ ಯಾದವನನ್ನು ದೇಶಸೇವೆಯಲ್ಲಿ ತೊಡಗಿಸುವುದು ವಿಧಿಯ ಸಂಕಲ್ಪವಾಗಿತ್ತೇನೋ. ಅದಕ್ಕೆ ನಿಮಿತ್ತರಾದವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪಕರಾದ ಡಾ. ಕೇಶವ ಬಲಿರಾಮ ಹೆಡಗೆವಾರ್. ಡಾಕ್ಟರ್ ಗುರೂಜಿಯವರ ಸಂಪರ್ಕ, ಪ್ರಭಾವಗಳಿಂದಾಗಿ, ಯಾದವರಾವ್ ಜೋಷಿಯವರು ಸಂಗೀತ ಕ್ಷೇತ್ರದ ಉಜ್ವಲ ಭವಿಷ್ಯದ ದಿಕ್ಕಿನಿಂದ ಹೊರಳಿ ದೇಶದ ಭವಿಷ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು.

ತಮ್ಮ ಹದಿನೈದನೆಯ ವಯಸ್ಸಿನಲ್ಲಿ, ಹಿರಿಯ ಪ್ರಚಾರಕರಾಗಿದ್ದ ಬಾಬಾ ಸಾಹೇಬ ಆಪ್ಟೆಯವರ ಪ್ರಭಾವದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯರಾದ ಜೋಷಿಯವರು ಬಹುಬೇಗ ಸಂಘದ ಸಂಸ್ಥಾಪಕ ಡಾ. ಹೆಡಗೆವಾರರ ಆಪ್ತವಲಯಕ್ಕೆ ಪ್ರವೇಶ ಗಳಿಸಿದರು. ಎಂ ಎ, ಎಲ್ ಎಲ್ ಬಿ ವ್ಯಾಸಂಗ ಮಾಡಿದರೂ ಯಾವ ವೃತ್ತಿಯನ್ನೂ ಕೈಗೊಳ್ಳಲಿಚ್ಛಿಸದ ಅವರು ದೇಶಸೇವೆಯ ವ್ರತವನ್ನು ಕೈಗೊಂಡರು. ಡಾ. ಹೆಡಗೇವಾರರ ಆದೇಶದಂತೆ ಸಂಘದ ಚಟುವಟಿಕೆಗಳನ್ನು ವಿಸ್ತರಿಸಲು ಕರ್ನಾಟಕಕ್ಕೆ ೧೯೪೧ ರಲ್ಲಿ ಆಗಮಿಸಿದ ಯಾದವ ರಾವ್ ಜೋಷಿಯವರು ಮುಂದಿನ ಐದು ದಶಕಗಳ ಕಾಲ ಕರ್ನಾಟಕವನ್ನೇ ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡರು. "ಸ್ವದೇಶಃ ಭುವನತ್ರಯಂ" ಎಂಬ ಸಂಘದ ತತ್ತ್ವವನ್ನು ಅಕ್ಷರಶಃ ಬದುಕಿ ತೋರಿಸಿದರು.

ಯಾದವ ರಾವ್ ಜೋಷಿಯವರ ಸಾರ್ವಜನಿಕ ಜೀವನದ ಎದುರು ಅವರ ವ್ಯಕ್ತಿಗತ ಜೀವನದ ವಿವರಗಳು ನಗಣ್ಯವಾಗುತ್ತವೆ. ಸಂಘದ ಪ್ರಚಾರಕರಾಗಿ ಅವರು ಮಾಡಿದ ಸಾಧನೆಗಳೇ ಅವರ ಜೀವನದ ಮೈಲಿಗಲ್ಲುಗಳು. ಕರ್ನಾಟಕಕ್ಕೆ ೧೯೪೧ ರಲ್ಲಿ ಪ್ರಾಂತೀಯ ಪ್ರಚಾರಕರಾಗಿ ಪಾದಾರ್ಪಣೆ ಮಾಡಿದ ಕೂಡಲೇ ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ಸಂಘದ ಪ್ರಥಮ ಶಾಖೆಯನ್ನು ಪ್ರಾರಂಭಿಸಿದರು. ನಂತರ, ಇಲ್ಲಿ ಅವರ ಜೊತೆ ಸೇರಿದ ಜಗನ್ನಾಥ ರಾವ್ ಜೋಷಿ ಮುಂತಾದವರ ಸಹಯೋಗದೊಂದಿಗೆ ಬೆಳಗಾವಿ, ಬೆಂಗಳೂರುಗಳಲ್ಲಿಯೂ ಸಂಘದ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಅವರು ಕಟ್ಟಿದ ತಂಡದಲ್ಲಿ ಶ್ರೀಯುತರಾದ ಹೊ. ವೆ. ಶೇಷಾದ್ರಿ, ಮೈ. ಚ. ಜಯದೇವ, ಭಾವೂರಾವ್ ದೇಶಪಾಂಡೆ, ನಾ. ಕೃಷ್ಣಪ್ಪ, ಜಗನ್ನಾಥರಾವ್ ಜೋಷಿ, ಸು. ರಾಮಣ್ಣ, ಮುಂತಾದ ಘಟಾನುಘಟಿಗಳೇ ಇದ್ದರೆನ್ನುವುದು ಅವರ ಸೂಜಿಗಲ್ಲಿನಂತಹ ವ್ಯಕ್ತಿತ್ವವನ್ನು ದರ್ಶಿಸುತ್ತದೆ.

ನೇರವಾದ ನಡೆ, ನುಡಿ, ಕರ್ತವ್ಯ ನಿಷ್ಠೆಗಳಿಗೆ ಉತ್ತಮ ಉದಾಹರಣೆ, ಶ್ರೀ ಯಾದವ ರಾವ್ ಜೋಷಿಯವರು. ಐವತ್ತರ ದಶಕದಲ್ಲಿ ಆರೆಸ್ಸೆಸ್ ಸಂಸ್ಥೆಯ ನಿಷೇಧವು ತಂದೊಡ್ಡಿದ ಸಮಸ್ಯೆಗಳನ್ನೇ ಅವಕಾಶಗಳನ್ನಾಗಿ ಬಳಸಿಕೊಂಡ ಜೋಷಿಯವರು ತಮ್ಮದೇ ದೃಷ್ಟಿಕೋನ ಮತ್ತು ವಿಶಿಷ್ಟ ಕಾರ್ಯಕ್ರಮಗಳ ಮೂಲಕ ಯುವ ಸ್ವಯಂ ಸೇವಕರನ್ನು ಆಕರ್ಷಿಸಿ ಕರ್ನಾಟಕದಲ್ಲಿ ಕ್ಷಿಪ್ರವಾಗಿ ಶಾಖೆಗಳ ವಿಸ್ತರಣೆಗೆ ಕಾರಣರಾದರು. ಸಮಾಜದಲ್ಲಿ ಅಸ್ಪೃಶ್ಯತೆ ನಿವಾರಣೆಯಂತಹ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ನೂರಾರು ಜನರನ್ನು ಆಕರ್ಷಿಸಿದರು.

೧೯೬೦ ರಲ್ಲಿ ಜೋಷಿಯವರಿಗೆ ಆಂಧ್ರ ಪ್ರದೇಶದ ಜವಾಬ್ದಾರಿಯನ್ನೂ ವಹಿಸಲಾಯಿತು. ೧೯೬೩ ರಲ್ಲಿ ಕೇರಳ ಮತ್ತು ತಮಿಳುನಾಡುಗಳನ್ನೊಳಗೊಂಡ ಮದ್ರಾಸ್ ಪ್ರಾಂತ್ಯದ ಪ್ರಚಾರದ ಹೊಣೆಯೂ ಅವರ ಹೆಗಲನ್ನೇರಿತು. ನಂತರ, ೧೯೭೮ ರಲ್ಲಿ ಸಂಘದ ಸಹ ಕಾರ್ಯವಾಹ ಪದವಿಯನ್ನು ವಹಿಸಿಕೊಂಡರು. ಈ ಅವಧಿಯಲ್ಲಿ ಅವರು ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದರು. ೧೯೭೫-೭೭ ರ ಅವಧಿಯಲ್ಲಿ ಇಂದಿರಾ ಗಾಂಧಿಯವರ ಅನುಶಾಸನ ಪರ್ವದ ಪರಿಣಾಮವಾಗಿ ಜೈಲು ವಾಸವನ್ನು ಅವರು ಅನುಭವಿಸಬೇಕಾಯಿತು.

ಹಿಂದೂ ರಾಷ್ಟ್ರೀಯತೆಯ ಪ್ರಬಲ ಪ್ರತಿಪಾದಕರಾಗಿದ್ದ ಶ್ರೀ ಯಾದವ ರಾವ್ ಜೋಷಿಯವರು ಅಸಂಖ್ಯ ಸಂಸ್ಥೆಗಳನ್ನು ಹುಟ್ಟು ಹಾಕಿದರು. ಅವುಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ತು (೧೯೬೫), ಹಿಂದೂ ಸೇವಾ ಪ್ರತಿಷ್ಠಾನ (೧೯೮೦) ಜನಸೇವಾ ವಿದ್ಯಾ ಕೇಂದ್ರ (೧೯೭೨), ಜಾಗರಣ ಪ್ರಕಾಶನ (೧೯೭೧), ಕೇರಳದ ಬಾಲಗೋಕುಲಂ (೧೯೭೪), ತಪಸ್ಯಾ (೧೯೭೫), ತಮಿಳು ನಾಡಿನ ಭಾರತೀಯ ವಿಚಾರ ಕೇಂದ್ರಂ (೧೯೮೨), ಹಿಂದೂ ಮುನ್ನಣಿ (೧೯೮೦), ಆಂಧ್ರಪ್ರದೇಶದ ಆದರ್ಶ ವಿದ್ಯಾಲಯ ಮುಂತಾದ ಸಂಸ್ಥೆಗಳು ಪ್ರಮುಖವಾಗಿವೆ. ಸಮ್ಮೇಳನಗಳನ್ನು ಸಂಘಟಿಸುವುದರಲ್ಲಿಯೂ ಜೋಷಿಯವರು ಸಿದ್ಧಹಸ್ತರು.

ಅವರು ೧೯೪೮, ೧೯೬೨ ಮತ್ತು ೧೯೮೨ ರಲ್ಲಿ ಆರೆಸ್ಸೆಸ್ ಸಂಘಟನೆಯ ಮೂರು ಬೃಹತ್ ಸಮ್ಮೇಳನಗಳ ರೂವಾರಿಯಾಗಿದ್ದರು. ಅವರು ೧೯೬೨ ರ ಡಿಸೆಂಬರಿನಲ್ಲಿ ಹಿಂದೂ ತರುಣ ಶಿಬಿರ, ೧೯೮೨ ರಲ್ಲಿ ಹಿಂದೂ ಸಂಗಮ, ಹಿಂದೂ ಸಮಾಜೋತ್ಸವ ಮುಂತಾದ ಅನೇಕ ಕಾರ್ಯಕ್ರಮಗಳ ಬೆನ್ನೆಲುಬಾಗಿ ನಿಂತರು. ಗೋಖಲೆಯವರು ಸಾರ್ವಜನಿಕ ಗಣೇಶೋತ್ಸವಗಳನ್ನು ಜನಪ್ರಿಯಗೊಳಿಸಿದಂತೆ ಜೋಷಿಯವರು ರಕ್ಷಾಬಂಧನವನ್ನು ವ್ಯಾಪಕವಾಗಿ ಆಚರಿಸಲು ತೊಡಗಿದರು. ಸರಳ ಸಂಸ್ಕೃತ ಸಂಭಾಷಣೆಗಾಗಿ ಪ್ರಚಾರಾಂದೋಲನವನ್ನೇ ನಡೆಸಿದರು.

ಸಂಘದ ಸಹಕಾರ್ಯವಾಹ ಪದವಿಯನ್ನು ಸ್ವೀಕರಿಸಿದ ನಂತರ ಅವರಿಗೆ ಕುಟುಂಬದ ವತಿಯಿಂದ ಬಂದ ಪಿತ್ರಾರ್ಜಿತ ಹಣವನ್ನು ಸಂಪೂರ್ಣವಾಗಿ "ಅಕ್ಷರಮ್" ಕಟ್ಟಡದ ನಿರ್ಮಾಣಕ್ಕೆ ಬಳಸಿದರು. ೧೯೯೨ ರಲ್ಲಿ ತಾವು ರುಗ್ಣಾವಸ್ಥೆಯಲ್ಲಿದ್ದಾಗಲೂ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಛೇರಿಯ ಕಟ್ಟಡ ನಿರ್ಮಾಣಕ್ಕೆ ನಿಧಿ ಸಂಗ್ರಹ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಈ ನಡುವೆ ಸಂಘದ ಕಾರ್ಯಕ್ಕಾಗಿ ೧೯೮೭-೮೮ ರಲ್ಲಿ ಮಾರಿಷಸ್, ನೈರೋಬಿ ದೇಶಗಳಿಗೂ ಭೇಟಿ ನೀಡಿದರು.

ಶ್ರೀ ಯಾದವ ರಾವ್ ಜೋಷಿಯವರು ೨೦/೦೮/೧೯೯೨ ರಂದು ಯಾದವ ಕೃಷ್ಣ ಜನಿಸಿದ ಗೋಕುಲಾಷ್ಟಮಿಯಂದು ಅಸ್ತಂಗತರಾದರು. ಕೊನೆಗಾಲದಲ್ಲಿ ಕಾಡಿಸಿದ ಕ್ಯಾನ್ಸರ್ ಅವರ ದೇಹವನ್ನು ಜರ್ಝರಿತಗೊಳಿಸಿದರೂ ಅವರ ಧೀಶಕ್ತಿ ಪ್ರಖರವಾಗಿಯೇ ಉಳಿದಿತ್ತು.

"ಮಹಾಮಂಗಲೇ ಪುಣ್ಯ ಭೂಮೇ ತ್ವದರ್ಥೇ
ಪತತ್ವೇಷಕಾಯೋ ನಮಸ್ತೇ ನಮಸ್ತೇ"

ಸಂಘದ ಪ್ರಾರ್ಥನಾ ಪದ್ಯದ " ಮಹಾಮಂಗಳೆ, ಪುಣ್ಯಭೂಮಿ ಭಾರತಿಯೆ, ನಿನ್ನ ಸೇವೆಯಲ್ಲಿ ಈ ದೇಹ ಬೀಳುವಂತಾಗಲಿ " ಎಂಬ ಮಾತನ್ನು ಅಕ್ಷರಶಃ ಬದುಕಿದ ಯಾದವ ರಾವ್ ಜೋಷಿಯವರು ಭಾರತಮಾತೆಯ ಪುಣ್ಯಪುತ್ರರು.

- ಕೆ. ಜನಾರ್ದನ ತುಂಗ

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: 8884182415

# ಅದಮ್ಯ ಚೇತನದ ತಿಂಗಳ ವರದಿ
## (೨೨ ನವೆಂಬರ್ ರಿಂದ ೨೨ ಡಿಸೆಂಬರ್ ೨೦೨೧ ರವರೆಗೆ)



ಅದಮ್ಯ ಚೇತನದ ಆಶ್ರಯದಲ್ಲಿ ನಡೆಯುತ್ತಿರುವ ಹಸಿರು ಭಾನುವಾರ ಕಾರ್ಯಕ್ರಮಗಳಲ್ಲಿ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿರುವುದು ಸಂತೋಷದ ವಿಷಯ. ಕಳೆದ ತಿಂಗಳು 309 ನೇ ಭಾನುವಾರದ ಕಾರ್ಯಕ್ರಮ ಬನಶಂಕರಿ ಎರಡನೇ ಹಂತದ ಧನ್ವಂತರಿ ಉದ್ಯಾನವನದ ಸಮೀಪ ನಡೆಯಿತು. 310 ನೇ ಭಾನುವಾರದ ಕಾರ್ಯಕ್ರಮ ಭವಾನಿ ಮಾನೆ ಸರೋವರದ ಆವರಣದಲ್ಲೂ 311 ನೇ ಕಾರ್ಯಕ್ರಮ ಕಮ್ಮಸಂದ್ರ ಕೆರೆಯ ಪ್ರದೇಶದಲ್ಲೂ ಜರುಗಿದವು.

ಕೊರೊನಾ ದೆಸೆಯಿಂದಾಗಿ ಆನ್ ಲೈನ್ ಕಾರ್ಯಕ್ರಮವಾಗಿ ನಡೆಯುತ್ತಿದ್ದ ಶ್ರೀ ಚೇತನ ಕಾರ್ಯಕ್ರಮವನ್ನು ಈ ತಿಂಗಳ ಮೊದಲ ಮಂಗಳವಾರ ಅದಮ್ಯಚೇತನ ಸಂಸ್ಥೆಯಲ್ಲಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಸಿದ್ದೊಂದು ವಿಶೇಷ. ಎಂದಿನಂತೆ ದೇಶಭಕ್ತಿ ಗೀತೆ, ಅಡುಗೆ ಆರೋಗ್ಯ, ಔಷಧೀಯ ಸಸ್ಯ ಪರಿಚಯ ಮೊದಲಾದವನ್ನು ಪ್ರಸ್ತುತ ಪಡಿಸುವ ಶ್ರೀ ಚೇತನ ಸಭೆ ತಿಂಗಳ ಉಳಿದ ಮಂಗಳವಾರಗಳಲ್ಲಿ ಆನ್ ಲೈನ್ ಕಾರ್ಯಕ್ರಮವಾಗಿ ಮುಂದುವರಿಯುತ್ತದೆ.

ಅದಮ್ಯ ಚೇತನದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದೆ. ಗವಿಪುರ, ಜಯನಗರ, ನಗರ್ತಪೇಟೆ ಹಾಗೂ ಜೆ ಪಿ ನಗರ ಕೇಂದ್ರಗಳಲ್ಲಿ ಪ್ರತಿನಿತ್ಯ ಅಗತ್ಯವಿದ್ದವರಿಗೆ ಮಧ್ಯಾಹ್ನದ ಊಟ ನೀಡಲಾಗುತ್ತಿದೆ. ಇದಲ್ಲದೆ, ಅರಸು ಕಾಲೊನಿ, ಇಂದಿರಾ ಕಾಲೊನಿ, ತಿಲಕ ನಗರ, ರಾಗಿಗುಡ್ಡ ಮೊದಲಾದ ಸ್ಥಳಗಳ ಸೇವಾ ಬಸ್ತಿಗಳಲ್ಲೂ ಅನ್ನದಾನ ವ್ಯವಸ್ಥೆ ಮಾಡಲಾಗುತ್ತಿದೆ. ಅಂತೆಯೇ ಅದಮ್ಯ ಚೇತನದ ಸೌತ್ ಎಂಡ್ ಕಚೇರಿಯ ಆವರಣದಲ್ಲಿ ಮಧ್ಯಾಹ್ನದ ಊಟದ ಅವಶ್ಯಕತೆಯಿರುವ ಕಾಲೇಜು ವಿದ್ಯಾರ್ಥಿಗಳಿಗಾಗಿ ಊಟ ಒದಗಿಸುವ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿದೆ.

ದೇಶದ ಪ್ರಖ್ಯಾತ ಉದ್ಯಮಿಗಳಲ್ಲೊಬ್ಬರಾದ ಡಾ. ವಿಜಯ ಸಂಕೇಶ್ವರ ಅವರು ಅದಮ್ಯಚೇತನಕ್ಕೆ ಭೇಟಿ ನೀಡಿ ಸಂಸ್ಥೆಯ ಚಟುವಟಿಕೆಗಳನ್ನು ವೀಕ್ಷಿಸಿ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಮತಿ ಅನ್ನಪೂರ್ಣ, ಆಹಾರ ವಿಜ್ಞಾನಿ ಡಾ. ಯೆಲ್ಲೋಜಿರಾವ್ ಮಿರಜ್ ಕರ್ ಮೊದಲಾದವರೂ ಸಂಸ್ಥೆಗೆ ಇತ್ತೀಚೆಗೆ ಭೇಟಿ ನೀಡಿರುತ್ತಾರೆ.



ಆಹಾರವಿಜ್ಞಾನಿ ಡಾ. ಯಲ್ಲೋಜಿರಾವ್ ಮಿರಜಕರ್ ಅದಮ್ಯಚೇತನಕ್ಕೆ ಭೇಟಿನೀಡಿದ ಸಂದರ್ಭ

# ಪ್ರೊ. ಪಿ.ವಿ. ಕೃಷ್ಣಭಟ್ ಅಭಿವಂದನೆ



ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ.ವಿ. ಕೃಷ್ಣಭಟ್ ಮತ್ತು ಶ್ರೀಮತಿ ಕಮಲಾದೇವಿ ದಂಪತಿಯವರ ಸಹಸ್ರಚಂದ್ರದರ್ಶನ ಶಾಂತಿ ಕಾರ್ಯಕ್ರಮವು ಇತ್ತೀಚೆಗೆ ಬೆಂಗಳೂರಿನ ಚಾಮರಾಜಪೇಟೆಯ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಕಲ್ಯಾಣ ಮಂಟಪದಲ್ಲಿ ನೆರವೇರಿತು.

೧೯೪೦ ಮೇ ೧೮ರಂದು ತೀರ್ಥಹಳ್ಳಿಯಲ್ಲಿ ಜನಿಸಿದ ಶ್ರೀ ಕೃಷ್ಣಭಟ್ಟರು ಶಿವಮೊಗ್ಗದ ಡಿ ವಿ ಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಸುದೀರ್ಘಕಾಲ ಸೇವೆ ಸಲ್ಲಿಸಿದರು. ಶಿಕ್ಷಣತಜ್ಞರಾಗಿ, ಕರ್ನಾಟಕ ರಾಜ್ಯ ಮತ್ತು ಕೇಂದ್ರಸರ್ಕಾರಗಳ ವಿವಿಧ ಶಿಕ್ಷಣ ಸಮಿತಿಗಳ ಸದಸ್ಯರಾಗಿ, ಸಲಹೆಗಾರರಾಗಿ ಶ್ರೀಯುತರು ನೀಡಿರುವ ಕೊಡುಗೆ ಮಹತ್ತ್ವದ್ದು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ಶ್ರೀ ಕೃಷ್ಣಭಟ್ಟರ ಮಾರ್ಗದರ್ಶನದಲ್ಲಿ ಶ್ರೀ ಅನಂತಕುಮಾರರೂ ಸೇರಿದಂತೆ ನಾಡಿನ ಅನೇಕ ಯುವಪ್ರತಿನಿಧಿಗಳು ಜನನಾಯಕರಾಗಿ ರೂಪುಗೊಳ್ಳಲು ಸಾಧ್ಯವಾಯಿತು.

ತಮ್ಮ ತಾಯಿತಂದೆಯವರ ಹೆಸರಿನಲ್ಲಿ ಗಂಗಮ್ಮ ವೆಂಕಟಸುಬ್ಬಾಭಟ್ಟ ಟ್ರಸ್ಟ್ ಅನ್ನು ಸ್ಥಾಪಿಸಿ ಹನ್ನೆರಡೂವರೆ ಲಕ್ಷ ರೂಪಾಯಿಗಳ ಶಾಶ್ವತನಿಧಿಯಿರಿಸುವುದಾಗಿ ಪ್ರಕಟಿಸಿದ ಶ್ರೀ ಕೃಷ್ಣಭಟ್ಟರು ಈ ನಿಧಿಯಿಂದ ಬರುವ ಬಡ್ಡಿಹಣವನ್ನು ಬಡವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ನೀಡಲು ಬಳಸುವುದಾಗಿ ತಿಳಿಸಿದರು. ಶ್ರೀಯುತರ ಸಹಸ್ರಚಂದ್ರದರ್ಶನದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕಸಂಘದ ಸಹಕಾರ್ಯವಾಹ ಶ್ರೀ ದತ್ತಾತ್ರೇಯ ಹೊಸಬಾಳೆ, ಖ್ಯಾತ ವಿದ್ವಾಂಸರಾದ ಶ್ರೀ ಶತಾವಧಾನಿ ಗಣೇಶ್, ಗ್ರಾಮೀಣ ಅಭಿವೃದ್ಧಿ ವಿಶ್ವವಿದ್ಯಾಲಯದ ಕುಲಪತಿ ಡಾ. ವಿಷ್ಣುಕಾಂತ ಚಟಪಲ್ಲಿ ಮೊದಲಾದವರು ಭಾಗವಹಿಸಿ, ಶ್ರೀಯುತರ ಜೀವನ ವ್ಯಕ್ತಿತ್ವಗಳ ಹಿರಿಮೆಯನ್ನು ಕುರಿತು ಮಾತನಾಡಿದರು. ಮಾಜಿ ಸಚಿವರಾದ ಶ್ರೀ ಡಿ.ಎಚ್. ಶಂಕರಮೂರ್ತಿ, ಶ್ರೀ ಅರವಿಂದ ಲಿಂಬಾವಳಿ, ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಡಾ. ತೇಜಸ್ವಿನಿ ಅನಂತಕುಮಾರ್, ಬಿ.ವೈ. ವಿಜಯೇಂದ್ರ, ಶಿಕ್ಷಣತಜ್ಞ ಪ್ರೊ.ಎಂ.ಕೆ. ಶ್ರೀಧರ್ ಮೊದಲಾದವರು ಉಪಸ್ಥಿತರಿದ್ದರು.


## ಅನಂತಪಥ

Editor: **Gopal T.S** | Asst. Editor: **K . Janardhana Thunga** | Layout: **Abhishek Gubbi Creatives**

Inputs: **Poornaprajna / Diwakar Hegde / Kengeri Chakrapani**

Photographs: **Kengeri Chakrapani / Adamya Chethana / Ananthkumar Prathishthana**

Acknowledgements: **Chaya Bapat / Adamya Chethana / All India Radio, Mysore / Dr. Babu Krishnamurthy**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )





ವಿ ಆರ್ ಎಲ್ ಸಮೂಹದ ಮುಖ್ಯಸ್ಥರಾದ ಶ್ರೀ ವಿಜಯ ಸಂಕೇಶ್ವರ ಅವರು ಇತ್ತೀಚೆಗೆ ಅದಮ್ಯ ಚೇತನಕ್ಕೆ ಭೇಟಿ ನೀಡಿ ಸಂಸ್ಥೆಯ ಕಾರ್ಯ, ಚಟುವಟಿಕೆಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.





ಬಿ ಎಂ ಎಸ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಕಾರ್ಯ ಯೋಜನೆಯ ಅಂಗವಾಗಿ ಅದಮ್ಯ ಚೇತನದ ಚಟುವಟಿಕೆಗಳಲ್ಲಿ ಭಾಗವಹಿಸಿ, ಅಡುಗೆಮನೆಯ ಕೆಲಸದಲ್ಲಿ ಕೈಜೋಡಿಸಿದರು.





ಹಸಿರು ಭಾನುವಾರ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವ ಯುವಜನರ ತಂಡ





ಅದಮ್ಯ ಚೇತನದ ವತಿಯಿಂದ ನಿತ್ಯ ಅನ್ನದಾನದ ಕಾರ್ಯಕ್ರಮ

## ಅನಂತ ಚಿತ್ರಸಂಪುಟ

### ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನದ ಸ್ಮರಣೆಯಲ್ಲಿ

**ಯುವನಾಯಕ ಅನಂತಕುಮಾರರನ್ನು ತಮ್ಮ ಕೇಂದ್ರಸಚಿವಸಂಪುಟಕ್ಕೆ ಸೇರಿಸಿಕೊಂಡು ಅವರ ಸಾಮರ್ಥ್ಯಕ್ಕೆ ಹೊಸ ಆಯಾಮವನ್ನು ಕಲ್ಪಿಸಿದ ಅಟಲ್ ಬಿಹಾರಿ ವಾಜಪೇಯಿಯವರ ಜೊತೆಗಿನ ಕೆಲವು ಚಿತ್ರಗಳು**












